ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ–೪ ಮೇ–ಜೂನ್–೨೦೦೪ ಸಂಚಿಕೆ–೧೦–[illegible]



ಮೇ ಮಾಹೆಯ ಐವರು ಮಹಾನುಭಾವರು

ರಾಜಾರಾಮ್ ಮೋಹನರಾಯ್

ರವೀಂದ್ರನಾಥ ಟಾಗೋರ್

ಗೋಪಾಲಕೃಷ್ಣ ಗೋಖಲೆ

ಬರ್ಟ್ರಾಂಡ್ ರಸೆಲ್

ಡಾ॥ ಹರ್ಡೀಕರ್

* ಈ ಸಂಚಿಕೆಯಲ್ಲಿ *

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಮೇ–೨೦೦೪
ಸಂಪುಟ ೪
ಸಂಚಿಕೆ ೧೦–೧೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/–
ಬಿಡಿ ಸಂಚಿಕೆ : ರೂ ೧೦/–

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೬ ೨೯೮೭೫೪

e-mail - janapada@yahoo.com

ಕನಸುಗಳಿವೆ ಬೇಕೆ?

ಕನಸುಗಳಿವೆ ನೋಡಿ ಮಾರಾಟಕ್ಕೆ
ಬೇಕೆ? ಬೇಕೇ ನಿಮಗೆ ಬೇಕೆ?
ಗರಿಯಗೂಡಿಗೆ ಕೊಳ್ಳಿ ಇಟ್ಟು ತಂದ
ಗರಿಗರಿಯ ಕನಸುಗಳಿವು.
ಚೌಕಾಶಿ ಬೆಲೆಗೆ ಕೊಳ್ಳುವಿರಂತೆ ॥ಬೇಕೆ?॥

ಜಾತಿ ವಿನಾಶದ ಕನಸುಗಳಿವೆ ನೋಡಿ
ಅಸ್ಪೃಶ್ಯತೆಯೇ ಇರದ
ಊರಿನ ಕನಸು ನೋಡಿ
ಸಾವಿರಾರು ವರ್ಷಗಳ
ಹಣ್ಣು ಹುಣ್ಣಾದ ಕನಸಿದೆ ನೋಡಿ ॥ಬೇಕೆ?॥

ದಲಿತನೊಬ್ಬನು ಪ್ರಧಾನಿಯಾಗುವ
ಸೊಂಪಾದ ಕನಸಿದೆ ಇಲ್ಲಿ ನೋಡಿ
ಸ್ಲಂ ನಿವಾಸಿಯೊಬ್ಬನು ಥಟ್ಟನೆ ಸಿ.ಎಂ ಆಗುವ
ಕನಸುಗಳಿವೆ ನೋಡಿ... ॥ಬೇಕೇ॥

ರಾಜಿಯ ಬೆಲೆಗೆ
ಶತಮಾನಗಳೇ ಉರುಳಿದರೂನು,
ಮಾಸದ ಮಾಗಿದ
ಕ್ರಾಂತಿಯ ಹಡೆಯುವ
ಕನಸೊಂದಿದೆ ನೋಡಿ, ॥ಬೇಕೆ?॥

ಜಾತಿ ತಾರತಮ್ಯವಿರದ,
ಸ್ಕೂಲಿಗೆ ಸೇರುವ ಮೊಗ್ಗಿನ ಕನಸಿದೆ ನೋಡಿ.
ಸಾರಾಯಿಯೇ ಇಲ್ಲದ
ಒಂದು ಸ್ಲಮ್ಮಿನ ಸರಳ ಕನಸಿದೆ.
ವಿರಳ ಕನಸಿದೆ. ॥ಬೇಕೆ?॥

ಪ್ರಾಜೆಕ್ಟು, ಪ್ರಪೋಸಲ್ಲು
ವರ್ಕ್‌ಶಾಪು, ಸಮಾವೇಶ,
ಈ ಶತಮಾನದ ಕೊನೇ ಅವಕಾಶ
ಇಗೋ ಇತಿಹಾಸದ ಬುಟ್ಟಿಯಲ್ಲಿವೆ
ಬೇಕೆ? ಬೇಕೇ ನಿಮಗೆ ಬೇಕೆ?

–ಸುರೇಶ್.ಪಿ

(ಸ್ಲಂ ಜಗತ್ತು ಸಾಭಾರ)

ವಿಚಾರ ದೀಪ್ತಿ

ಉಪ್ಪರಿಗೆ ಮನೆ ವಾಸಕ್ಕೆ ಇದ್ದರೇನು, ಶ್ರೀಮಂತ ತನ್ನ ದೇಹಕ್ಕಿಂತ ಹೆಚ್ಚಿನ ಜಾಗ ಆಕ್ರಮಿಸಲಾರ. ಅಡಿಗೆಯವರು ಏಳೆಂಟು ಜನ ಇದ್ದರೇನು, ಹೊಟ್ಟೆ ತುಂಬಿದ ಮೇಲೆ ಒಂದು ತುತ್ತು ಯಾವನೂ ಎತ್ತಲಾರ. ಘಂಟೆಗಟ್ಟಲೆ ಕಲಾವಂತಿಕೆಯಿಂದ ನರ್ತಕಿ ನಾಟ್ಯಗೈದರೇನು, ಕೊನೆಗೆ ದಣಿದು ವಿಶ್ರಾಂತಿಗೆ ಶರಣಾಗಲೇ ಬೇಕು. ಮದ್ದಾನೆಯಂಥ ಜಗಜಟ್ಟಿಯಾಗಿರಲಿ, ಗಿರಿಗಹ್ವರದ ಯೋಗಿಯಾಗಿರಲಿ ಅನ್ನೋದಕ ಇಲ್ಲದಿದ್ದರೆ ಬಾಳಲಾರ. ಪ್ರಕೃತಿ ನೇಮಕ್ಕೆ ತಲೆಬಗ್ಗಿಸದೆ ಆಗದು ಮಾನವಗೆ, ರಂಗಯ್ಯ!

ಹಿಂದಣ ಪದ್ಧತಿ ಇಂದು ಸಲ್ಲದೆಂದು ತೀರ್ಮಾನಿಸಿ, ಅದನ್ನು ಬಿಟ್ಟುಕೊಟ್ಟು ಪತ್ನಿ ಪತಿಗೆ ಸರಿಸಮಾನಳೆಂದು ಹಠತೊಟ್ಟು, ಅವಳಿಗೆ ಅರ್ಧ ಪೀಠವ ಕೊಟ್ಟು, ಗೆಳತಿಯಂತೆ ಕಾಣುವುದು ಒಂದು ರೀತಿ. ಅದರಿಂದ ಮೊದಮೊದಲು ಸಂತಸ ಹೆಚ್ಚುತ್ತ ಹೋಗಬಹುದು ಶುಕ್ಲಪಕ್ಷದ ಬೆಳ್ದಿಂಗಳಿನಂತೆ. ಕ್ರಮೇಣ ಯಾವುದೊ ಕೊರತೆ ಅದರಲ್ಲಿ ಇದೆಯೆಂಬ ಸಂದೇಹ ಅಂಕುರಿಸಿ ಬೆಳೆದು ಅನ್ಯೋನ್ಯಕ್ಕೆ ಹುಳಿ ಹಿಂಡುವುದೊ ಏನೊ! ಪ್ರಕೃತಿದೇವಿ ಲಿಖಿಸಿಟ್ಟಿರುವ ಲಿಂಗಬೇಧವನ್ನು ಪೂರ್ತಿ ಉಲ್ಲಂಘಿಸಲಾದೀತೆ ಯಾರಿಗಾದರು?

ಉಳ್ಳವರು ಇಲ್ಲದವರೆಂಬ ವಿಭಜನೆ ಬಲು ಹಿಂದಿನದು. ಉಳ್ಳವರ ಹಾರೈಕೆ ಎರಡು: ತಮ್ಮ ಆಸ್ತಿಪಾಸ್ತಿ ವೃದ್ಧಿಹೊಂದುತ್ತಿರಬೇಕು, ದರಿದ್ರರಿರಬೇಕು. ಧರಿತ್ರಿಯ ಮೇಲೆ ಸದಾಕಾಲ ಇಲ್ಲದವರಿಗೂ ಅಭೀಪ್ಸೆ ಎರಡು: ತಾವು ಧನಿಕರಾಗಬೇಕು, ಧನವಂತರೆಲ್ಲ ನಿರ್ಗತಿಕರಾಗಬೇಕು. ಬೇಗ ಬಡವ ಬಲ್ಲಿದ ಮಾಲೀಕ ಕಾರ್ಮಿಕ ಭೂಸ್ವಾಮಿ ಗೇಣಿದಾರ ಎಂಬ ವರ್ಗಗಳ ಎಲ್ಲ ತಿಕ್ಕಾಟಕ್ಕೂ ಈ ದ್ವಂದ್ವಾಪೇಕ್ಷೆಯೆ ಮೂಲ, ದ್ವಂದ್ವಾತೀತ ರಂಗೇಶ.

—ಎಸ್. ವಿ. ರಂಗಣ್ಣ

ಮೇ ಮಾಹೆಯ ಐವರು ಮಹಾನುಭಾವರು

-ಸುರೇಂದ್ರ ಕೌಲಗಿ

ವರ್ಷದ ಪ್ರತಿಯೊಂದು ತಿಂಗಳು ಒಂದಲ್ಲ ಒಂದು ಕಾರಣಕ್ಕೆ ಮಹತ್ವವನ್ನು ಪಡೆದಿರುತ್ತದೆ. ಆದರೆ ಆ ವರ್ಷದ ಯಾವುದಾದರೊಂದು ತಿಂಗಳು ಬೇರೆಲ್ಲ ತಿಂಗಳುಗಳಿಗಿಂತ ಹೆಚ್ಚು ಮಹತ್ವ ಪಡೆದಿರುತ್ತದೆ. ಇದಕ್ಕೆ ಕಾರಣವಾಗಿ ಅನೇಕ ಸಂಗತಿಗಳು ಇಲ್ಲವೆ ಘಟನೆಗಳು ಇಲ್ಲವೆ ಯಾವುದೋ ಒಬ್ಬ ಮಹಾನ್ ವ್ಯಕ್ತಿಯ ಜನ್ಮದಿನ ಆ ತಿಂಗಳೊಂದಿಗೆ ಸಂಬಂಧಿಸಿರುತ್ತದೆ. ಹಾಗೆ ನೋಡಿದರೆ ಮನುಷ್ಯನ ಜೀವಿತ ಕಾಲದಲ್ಲಿ ಅವನ ಪ್ರತಿಯೊಂದು ಕ್ಷಣ, ಪ್ರತಿಯೊಂದು ದಿನ ಮಹತ್ವದ್ದಾಗಿರುತ್ತದೆ. ಡಿ.ವಿ.ಜಿ ಹೇಳುವಂತೆ ಒಂದು ರಾತ್ರಿಯನ್ನು ಕಳೆದು ಮಾರನೇ ಬೆಳಿಗ್ಗೆ ಹಾಸಿಗೆಯಿಂದ ಎದ್ದೇಳುವುದೇ ಒಂದು ಪವಾಡ. ಜೀವನ ಇಷ್ಟು ಸೂಕ್ಷ್ಮವಾಗಿದ್ದರೂ ಕೆಲವು ವಿಶೇಷ ಕಾರಣಗಳಿಂದಾಗಿ ಯಾವುದೋ ಒಂದು ಕಾಲಘಟ್ಟ ಮಹತ್ವದ್ದಾಗಿರುತ್ತದೆ. ಆ ದೃಷ್ಟಿಯಿಂದ ಗತಿಸಿಹೋದ ಕಾಲವನ್ನು ನೋಡಿದಾಗ ಮೇ ಮಾಹೆ ಉಳಿದೆಲ್ಲ ಮಾಹೆಗಳಿಗಿಂತ ಹೆಚ್ಚಿನ ಮಹತ್ವಪಡೆದಿರುವ ತಿಂಗಳಾಗಿ ನಮಗೆ ಗೋಚರಿಸುತ್ತದೆ. ಈ ತಿಂಗಳಲ್ಲಿ ಜಗತ್ತಿನ ಶ್ರೇಷ್ಠ ವ್ಯಕ್ತಿಗಳೆನ್ನಿಸಿಕೊಳ್ಳಬಹುದಾದ ಐದು ಮಹಾನುಭಾವರು ಜನಿಸಿದರು. ಅವರಲ್ಲಿ ನಾಲ್ವರು ನಮ್ಮ ಭಾರತೀಯರರೇ ಆಗಿದ್ದಾರೆ. ಇದು ನಮಗೆ ಹೆಚ್ಚಿನ ಸಂತೋಷವನ್ನು ತರುವ ಮತ್ತು ಗೌರವವನ್ನು ತರುವ ಸಂಗತಿಯಾಗಿದೆ. ಆಶ್ಚರ್ಯವೇನೆಂದರೆ ಇವರ ಚಿಂತನೆಯು ಕಾಲ, ದೇಶ ವರ್ತಮಾನವನ್ನು ಮೀರಿ ನಿಂತಹುದಾಗಿದೆ. ಇವರ ವಿಚಾರಗಳು ಅವರ ಸಮಕಾಲೀನ ಸಮಾಜದ ಮೇಲೆ ಪ್ರಭಾವ ಬೀರುವುದರೊಂದಿಗೆ, ಅಮೂರ್ತವೆನಿಸಿದ್ದ ಸಮಾಜಕ್ಕೆ ತನ್ನದೇ ಆದ ವ್ಯಕ್ತಿತ್ವವನ್ನು ತಂದುಕೊಟ್ಟವು! ನಾಗರಿಕತೆಯ ಕಾಂತಿಯನ್ನು ತಂದು ಕೊಟ್ಟವು. ಸಂಸ್ಕೃತಿಗೆ ಚಾಲನೆಯನ್ನು ಕೊಟ್ಟವು. ಈ ಐವರು ಇದ್ದ ಕಾಲದಲ್ಲಿಯ ಸಮಾಜ ಜೀವನವನ್ನು ನಾವು ಗಮನಿಸಿ ನಂತರ ಇವರ ಇಲ್ಲದಿರುವಿಕೆಯನ್ನು ಕಲ್ಪಿಸಿಕೊಂಡರೆ ನಮ್ಮನ್ನು ಅಗಾಧವಾದ ಭೀತಿ ಆವರಿಸಿಕೊಳ್ಳುತ್ತದೆ! ನಮ್ಮ ಸಮಾಜದ, ಮುಖ್ಯವಾಗಿ ನಮ್ಮ ದೇಶದ ಭವಿಷ್ಯ ಎಂಥ ಅಂಧಕಾರಮಯುವಾಗುತ್ತಿತ್ತೆಂಬುದನ್ನು ತಿಳಿದು ಚಿಂತೆಗೊಳಗಾಗುತ್ತದೆ. ಉದ್ಭವಿಸಬಹುದಾದ ಇಂಥ ಚಿಂತೆ ಮತ್ತು ಭೀತಿಗಳಿಂದ ಭಾರತೀಯರನ್ನು ಬಿಡುಗಡೆ ಮಾಡಿದ ಐದು ಮಹಾನುಭಾವರು ಮೇ ತಿಂಗಳಲ್ಲಿಯೇ ಹುಟ್ಟಿದರೆಂಬ ಕಾರಣಕ್ಕಾಗಿ ಮೇ ತಿಂಗಳು ವಿಶೇಷ

ಮಹತ್ವದ ತಿಂಗಳಾಗಿರುವುದರಲ್ಲಿ ಏನೂ ಆಶ್ಚರ್ಯವಿಲ್ಲ.

ಈ ಐವರನ್ನು ಸ್ಮರಿಸಿಕೊಳ್ಳುವುದೇ ಒಂದು ಪುಣ್ಯದ ಕೆಲಸ. ಅವರ ಜೀವನ ಚರಿತ್ರೆಯನ್ನು ಓದುವುದೇ ಒಂದು ಯಜ್ಞ. ಅವರ ವಿಚಾರಗಳನ್ನು ಜೀವನದಲ್ಲಿ ಅನುಷ್ಠಾನಗೊಳಿಸುವುದೇ ಒಂದು ತೀರ್ಥಯಾತ್ರೆ.

ರಾಜಾರಾಮ್ ಮೋಹನರಾಯ್

ಇತಿಹಾಸದ ಮೇಲೆ ಹಿಡಿತ ಸಾಧಿಸಿದಂಥ ಈ ಐವರು ಮಹಾನುಭಾವರಲ್ಲಿ ಮೊದಲನೆಯವರು ರಾಜಾರಾಮ್ ಮೋಹನರಾಯ್. ಇವರ ಹೆಸರನ್ನು ಕೇಳದೇ ಇರುವಂಥ ಯಾವುದೇ ಒಬ್ಬ ವಿದ್ಯಾರ್ಥಿ, ಒಬ್ಬ ವಿದ್ಯಾವಂತ ಕ್ವಚಿತ್ತಾಗಿ ಸಿಗಬಹುದು. ಆದರೆ ಮೋಹನರಾಯ್ ಗತಿಸಿಹೋಗಿ ಇಂದಿಗೆ ಇನ್ನೂರು ಮೂವತ್ತೆರಡು ವರ್ಷಗಳಾಗಿರುವುದರಿಂದ ಅವರನ್ನು ಈಗ ನೆನಪಿಸಿಕೊಳ್ಳುವುದು ಅಪ್ರಸ್ತುತ ಅಥವಾ ಅನಾವಶ್ಯಕವಾದ ಭಾರ ಹೊರುವ ಕೆಲಸವೆಂದು ಅನೇಕರು ಭಾವಿಸಬಹುದು. ಆದರೆ ಹಿರಿಯರು ಹೇಳಿದ ಮಾತುಗಳು, ಅವರ ಸಾಧನೆಗಳು ಮಣ್ಣಿನಾಳದಲ್ಲಿ ಹುದುಗಿರುವ ಬೀಜಗಳಂತೆ. ಆ ಬೀಜಗಳು ಕಾಲಗತಿಗನುಸಾರವಾಗಿ ಮೊಳಕೆಯೊಡೆದು ಹೊರಬರುವುದಕ್ಕೆ ಹೊಸ ಪೀಳಿಗೆಯು ಅವಕಾಶ ಮಾಡಿಕೊಟ್ಟರೆ ಯುವಕರ ಜೀವನವು ಹೊಸ ಮೆರುಗನ್ನು ಪಡೆಯುವುದಲ್ಲದೆ ನಮ್ಮ ದೇಶ ಹಾಗೂ ಸಮಾಜವು ಹೊಂದಿರುವ ವೈಚಾರಿಕ ಜಾಡ್ಯತೆಯಿಂದ ಹೊರಬರಬಹುದು.

ರಾಜಾರಾಮ್ ಮೋಹನ್ ರಾಯ್‌ರ ವಿಚಾರಗಳು ಮತ್ತು ಸಮಾಜ ಸುಧಾರಣಾ ಕಾರ್ಯಕ್ರಮಗಳು ಎಷ್ಟೊಂದು ತೀಕ್ಷ್ಣವೂ, ದೂರದರ್ಶಿತ್ವವುಳ್ಳವೂ ಹಾಗೂ ಪರಿಣಾಮಕಾರಿಯೂ ಆಗಿದ್ದುವೆಂದರೆ "ಮಾನವನ ವ್ಯಕ್ತಿತ್ವ ಎಷ್ಟರ ಮಟ್ಟಿಗೆ ಚಾರಿತ್ರಿಕ ಸನ್ನಿವೇಶಗಳ ಪ್ರಭಾವಕ್ಕೆ ಒಳಪಟ್ಟಿದೆಯೋ ಅಷ್ಟರ ಮಟ್ಟಿಗೆ ಚರಿತ್ರೆಯೂ ಮಾನವನ ವ್ಯಕ್ತಿತ್ವದಿಂದ ರೂಪಿತವಾಗುತ್ತದೆ." ಎಂಬ ಓರ್ವ ಸಮಾಜ ವಿಜ್ಞಾನಿಯ ಮಾತು ರಾಜಾರಾಮ್ ಮೋಹನರಾಯರ ಬಗ್ಗೆ ನೂರಕ್ಕೆ ನೂರು ಅನ್ವಯಿಸುತ್ತದೆ.

ಸತಿ ಸಹಗಮನ ಪದ್ಧತಿ, ಬಾಲ್ಯ ವಿವಾಹ, ಶಿಶುಹತ್ಯೆ, ಮಹಿಳೆಯರ ಕೇಶ ಮುಂಡನ ಪದ್ಧತಿ, ಮಹಿಳಾ ಶೋಷಣೆ, ಹಿಂದೂಧರ್ಮದ ಅವಹೇಳನ ಮುಂತಾದ ಘೋರರೂಪದ ಸಾಮಾಜಿಕ ಸಮಸ್ಯೆಗಳ ವಿರುದ್ಧ ಮೋಹನರಾಯರು ಎಷ್ಟು ಪಟ್ಟು ಹಿಡಿದು ಹೋರಾಟಮಾಡಿದರೆಂದರೆ, ಈ ಎಲ್ಲಾ ಕೆಟ್ಟ ಸಂಪ್ರದಾಯಗಳನ್ನು ಶಾಸ್ತ್ರೋಕ್ತವಾಗಿ ಸಮರ್ಥಿಸುತ್ತಿದ್ದ ಧರ್ಮಾಂಧರ ಬಾಯಿಯನ್ನು ಮುಚ್ಚುವುದರ ಜೊತೆಗೆ ಈಸ್ಟ್ ಇಂಡಿಯಾ ಕಂಪನಿಯ ಆಡಳಿತಗಾರರು ಈ ಸಂಬಂಧವಾದ ಕಾನೂನುಗಳನ್ನು ಮಾಡುವಂತೆ ಒತ್ತಾಯಿಸಲು ದೊರೆಯುವರೆಗೆ ದೂರು ಎಂಬಂತೆ

ಇಂಗ್ಲೆಂಡಿಗೂ ಹೋಗಿ ಸತಿಪದ್ಧತಿಯನ್ನು ರದ್ದುಗೊಳಿಸುವ ಮತ್ತು ಈಸ್ಟ್ ಇಂಡಿಯಾ ಕಂಪನಿಯ ಪ್ರಣಾಳಿಕೆಯನ್ನು ರದ್ದುಗೊಳಿಸುವ ಆಜ್ಞೆಗೆ ಅಲ್ಲಿಯ ಪ್ರೀವಿಕೌನ್ಸಿಲ್ ಹಸ್ತಾಕ್ಷರವನ್ನು ಹಾಕುವುದನ್ನು ಸಹ ನೋಡಿದರು. ಹೀಗೆ ಹಿಡಿದ ಕೆಲಸದ ಸಿದ್ಧಿಯನ್ನು ನೋಡುವ ಭಾಗ್ಯ ರಾಜಾರಾಮ್ ಮೋಹನರಾಯ್‌ರಂಥವರಿಗೆ ಮಾತ್ರ ಸಾಧ್ಯ.

ಇಷ್ಟೆ ಅಲ್ಲ, ಅವರು ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಲ್ಲಿ, ಹೊಸ ವಿಚಾರಗಳನ್ನು ಮಂಡಿಸಿದವರಲ್ಲಿ, ಸಲಹೆಗಳನ್ನು ಕೊಟ್ಟವರಲ್ಲಿ ಮೊದಲಿಗರಾಗಿದ್ದರು.

ಮೊಟ್ಟ ಮೊದಲನೆಯದಾಗಿ ಜಗತ್ತಿನ ನಾಲ್ಕು ಪ್ರಮುಖ ಧರ್ಮಗಳಾದ ಹಿಂದೂ, ಕ್ರಿಶ್ಚಿಯನ್, ಇಸ್ಲಾಂ, ಮತ್ತು ಬೌದ್ಧ ಧರ್ಮಗಳ ತುಲನಾತ್ಮಕ ಅಧ್ಯಯನ ಮಾಡಿದವರಲ್ಲಿ ಮೋಹನ್‌ರಾಯರೇ ಮೊದಲಿಗರು. ಈ ಅಧ್ಯಯನದಿಂದ ಅವರು ವಿಶ್ವಧರ್ಮದ ವಿಚಾರವನ್ನು ಜಗತ್ತಿನ ಮುಂದೆ ಇಟ್ಟರು. ಅವರು ಎಲ್ಲ ಧರ್ಮಗಳನ್ನು ಜನರು ಯಾವ ರೀತಿ ನೋಡಬೇಕೆಂಬ ಬಗ್ಗೆ ಇನ್ನೂರು ವರ್ಷಗಳ ಹಿಂದೆ ಹೇಳಿದ ಈ ಮಾತು ಇಂದಿಗೂ ಗುಜರಾತ್ ಮತ್ತುಇನ್ನಿತರ ಸ್ಥಳಗಳಲ್ಲಿ ನಡೆದ ಧರ್ಮಾಧಾರಿತ ಹತ್ಯಾಕಾಂಡದ ಸಚಿದರ್ಭದಲ್ಲಿ ಎಷ್ಟು ಪ್ರಸ್ತುತವಾಗಿದೆ ಎಂದು ಗೊತ್ತಾಗುತ್ತದೆ. ಒಂದುಸಲ ಅವರ ಹೆಂಡತಿ ಮೋಹನ್ ರಾಯರನ್ನು ' ಧರ್ಮಗಳಲ್ಲೆಲ್ಲ ಉತ್ತಮ ಧರ್ಮ ಯಾವುದು ಎಂದು ಕೇಳಿದ್ದಕ್ಕೆ "ಹಸುಗಳ ಬಣ್ಣ ಬೇರೆ ಬೇರೆ ಯಾಗಿರಬಹುದು. ಅವು ಕೊಡುವ ಹಾಲಿನ ಬಣ್ಣ ಒಂದೇ. ಬೇರೆ ಬೇರೆ ಬೋಧಕರು ಬೇರೆ ಬೇರೆ ವರ್ಣನೆ ಮಾಡಬಹುದು. ಎಲ್ಲ ಧರ್ಮಗಳ ತಿರುಳು ಒಂದೇ. ಅದೇ ಸತ್ಯದ ಮಾರ್ಗದಲ್ಲಿ ನಡೆಯುವುದು" ಎಂದು ಉತ್ತರ ಕೊಟ್ಟರು.

ಭಾರತಕ್ಕೆ ಮೊಟ್ಟ ಮೊದಲಬಾರಿಗೆ ಇಂಗ್ಲಿಷ್ ಶಿಕ್ಷಣವನ್ನು ಪ್ರಾರಂಭಿಸಿದವರು ಸಹ ಮೋಹನ್ ರಾಯರೇ. ಈಸ್ಟ್ ಇಂಡಿಯಾ ಕಂಪನಿಯಿದ್ದಾಗಲೇ ಪತ್ರಿಕೆಯನ್ನು ಪ್ರಾರಂಭಿಸಿ ಭಾರತದ ಮೊಟ್ಟಮೊದಲ ಪತ್ರಿಕೆಗಳ ಮೂಲಕ ಅವರು ಹಿಂದೂ ಧರ್ಮದಲ್ಲಿಯ ತಪ್ಪು ಆಚಾರ-ವಿಚಾರಗಳನ್ನು ಖಂಡಿಸುವುದರ ಜೊತೆಗೆ ಈಸ್ಟ್ ಇಂಡಿಯಾ ಕಂಪನಿ ಭಾರತವನ್ನು ಮತ್ತು ಭಾರತೀಯರನ್ನು ಯಾವ ಯಾವ ಬಗೆಯಲ್ಲಿ ಶೋಷಣೆ ಮಾಡುತ್ತದೆ ಎಂಬುದನ್ನು ಸಾಕ್ಷ್ಯಾಧಾರಗಳ ಜೊತೆಗೆ, ಅಂಕಿ ಸಂಖ್ಯೆಗಳ ಜೊತೆಗೆ ಪ್ರಕಟಿಸಿ ಆ ವಿಷಯವು ಇಂಗ್ಲೆಂಡಿನಲ್ಲಿರುವವರಿಗೂ ತಿಳಿಯುವಂತೆ ಮಾಡಿ ಅಲ್ಲಿಯ ವಿಚಾರವಂತರು ಕಂಪನಿಯ ದಷ್ಕೃತ್ಯಕ್ಕಾಗಿ ತಲೆತಗ್ಗಿಸುವಂತೆ ಮಾಡಿದರಲ್ಲದೆ, ಆಡಳಿತದಲ್ಲಿ ಕೆಲ ಸುಧಾರಣೆಗಳು ಆಗುವಂತೆ ಮಾಡಿದರು.

ಅವುಗಳಲ್ಲಿ ಅತ್ಯಂತ ಮುಖ್ಯವಾದುದು ಮಹಿಳೆಯರಿಗೆ ತಂದೆಯ ಮತ್ತು ಗಂಡನ ಆಸ್ತಿಯಲ್ಲಿ ಹಕ್ಕಿರುವಂತೆ ಮಾಡಿದುದು. ಮಹಿಳೆಯರ ಈ ಹಕ್ಕಿನ ವಿಷಯ ಇನ್ನೂ ನಮ್ಮ ದೇಶದಲ್ಲಿ ಗೊಂದಲದಲ್ಲಿಯೇ ಇದೆ. ಇಂಥ ಪುರೋಗಾಮಿ ವಿಚಾರದ ಕೆಲಸವನ್ನು ಅಷ್ಟು ವರ್ಷಗಳ ಹಿಂದೆ ಮೋಹನ್ ರಾಯ್ ಮಾಡಿದ್ದು ಸಾಹಸವೇ.

ಸತಿಸಹಗಮನ ಪದ್ಧತಿ ರದ್ದಾಗುವಂತೆ ಮಾಡಿದ್ದು, ಬಾಲ್ಯ ವಿವಾಹ ಇಲ್ಲದಂತೆ ಮಾಡಿದ್ದು, ಪತ್ರಿಕಾಸ್ವಾತಂತ್ರ್ಯವನ್ನು ಮರು ಸ್ಥಾಪಿಸಿದ್ದು, ಇಂಗ್ಲಿಷ್ ವಿದ್ಯಾಭ್ಯಾಸ ಭಾರತೀಯರಿಗೆ ದೊರೆಯುವಂತೆ ಮಾಡಿದ್ದು ಇವೆಲ್ಲ ಹೆಚ್ಚಾಗಿ ಏಕವ್ಯಕ್ತಿಯ ಪ್ರಯತ್ನಗಳೇ ಎಂದು ನಮಗೆ ತಿಳಿದಾಗ ಆವರ ವ್ಯಕ್ತಿಗತ ಸಾಮರ್ಥ್ಯದ ಮೇರುದರ್ಶನವಾಗುತ್ತದೆ. ಇವೆಲ್ಲ ಸಾಧನೆಗಳನ್ನು ಮಾಡುವಾಗ ಅವರ ಮುಂದಿದ್ದ ಪರಿಸ್ಥಿತಿಯನ್ನೂ, ಇತಿಮಿತಿಯನ್ನೂ ನಾವು ಈಗ ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

ಮೋಹನ್‌ರಾಯರು ಸಂಸ್ಕೃತ, ಪಾರಸಿ, ಅರೇಬಿಕ್, ಇಂಗ್ಲಿಷ್ ಮುಂತಾದ ಭಾಷೆಗಳಲ್ಲಿ ಉದ್ದಾಮ ಪಂಡಿತರಾಗಿದ್ದರು. ಅನೇಕ ವೇದ ಉಪನಿಷತ್ತುಗಳ ಭಾಗಗಳನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿ ಹಿಂದೂಧರ್ಮದಲ್ಲಿರುವ ಉಚ್ಛಕೋಟಿಯ ವಿಚಾರದ ಪ್ರಖರತೆಯನ್ನು ಪಾಶ್ಚಿಮಾತ್ಯರಿಗೆ ತಿಳಿಯುವಂತೆ ಮಾಡಿದ್ದೂ ಸಹ ಮೋಹನ್‌ರಾಯರು.

ಇವೆಲ್ಲ ಅಧ್ಯಯನಗಳ ಕಾರಣದಿಂದ ಅವರ ಪ್ರಾಪಂಚಿಕ ದೃಷ್ಟಿ ಎಷ್ಟು ವಿಶಾಲವಾಗಿತ್ತೆಂದರೆ ೧೮೨೩ರಲ್ಲಿ ದಕ್ಷಿಣ ಅಮೇರಿಕಾದ ಸ್ಪ್ಯಾನಿಷ್ ವಸಾಹತುಗಳು ಸ್ವಾತಂತ್ರ್ಯಗಳಿಸಿದವೆಂಬ ವರ್ತಮಾನ ಬಂದಾಗ ಅವರು ತಮ್ಮ ಸ್ನೇಹಿತರಿಗೆಲ್ಲ ಒಂದು ಭೋಜನಕೂಟವೇರ್ಪಡಿಸಿದರು. ಪೋರ್ಚುಗಲ್‌ನಲ್ಲಿ ಪ್ರಜಾಸರ್ಕಾರ ಸ್ಥಾಪಿತವಾದಾಗ ರಾಮಮೋಹನರಾಯರಿಗೆ ಬಹಳ ಸಂತೋಷವಾಯಿತು. ಈ ಮುಂತಾದ ಉದಾಹರಣೆಗಳಿಂದ ರಾಮಮೋಹನ ರಾಯರಿಗೆ ಯಾವುದೇ ಮಾಧ್ಯಮಗಳು ಇಲ್ಲದಿದ್ದಂತಹ ಕಾಲದಲ್ಲಿಯೂ ಎಂಥ ಪ್ರಗತಿದಾಯಕ ವಿಚಾರಗಳನ್ನು ಹೊಂದಿದ್ದರೆಂಬುದು ಗೊತ್ತಾಗುತ್ತದೆ. ಅವರ ದೂರದರ್ಶಿತ್ವಕ್ಕೆ ಮತ್ತು ವಿಶ್ವಕ್ಷೇಮಕ್ಕೆ ಸಂಬಂಧಿಸಿದಂಥ ಈ ಉದಾಹರಣೆಯನ್ನು ನೋಡೋಣ. ೧೮೩೧ ರ ವೇಳೆ ಗಾಗಲೆ ರಾಷ್ಟ್ರ ರಾಷ್ಟ್ರಗಳ ನಡುವೆ ಉತ್ಪನ್ನವಾಗಬಹುದಾದ ವಿವಾದಗಳ ತೀರ್ಮಾನಕ್ಕೂ, ಜಗತ್ ಶಾಂತಿಯ ಸ್ಥಾಪನೆಗೂ ಸಹಾಯಕವಾಗುವಂಥ ಅಂತಾರಾಷ್ಟ್ರೀಯ ಸಂಘವೊಂದರ ಕಲ್ಪನೆ ರಾಮಮೋಹನ್‌ರಿಗೆ ಬಂದಿದ್ದಿತೆಂಬುದು ಬಹಳ ಮೆಚ್ಚಬೇಕಾದ ಸಂಗತಿಯಾಗಿದೆ. ಏಕೆಂದರೆ ಇಂದಿನ ಸಂಯುಕ್ತರಾಷ್ಟ್ರಸಂಘದ

ಸ್ಥಾಪನೆಯಾಗುವುದಕ್ಕೆ ಮುಂಚೆ ೧೧೪ ವರ್ಷಗಳಷ್ಟು ಮೊದಲೇ ಇಂಥ ಸಂಘಟನೆಯ ಅಗತ್ಯತೆಯನ್ನು ಹೇಳಿದ್ದರೆಂದರೆ ರಾಮಮೋಹನ್ ರಾಯರ ವಿಶ್ವದೃಷ್ಟಿಗೆ ಮತ್ತು ವಿಶ್ವಶಾಂತಿಯ ಬಗ್ಗೆ ಇದ್ದ ಕಾಳಜಿ ಗೊತ್ತಾಗುತ್ತದೆ. ಅವರು ಸಮಾಜ ಸುಧಾರಣೆಯ ಬಗ್ಗೆ ಎಷ್ಟು ಕಟಿಬದ್ಧರಾಗಿದ್ದರೆಂಬುದಕ್ಕೆ ಅವರೇ ಹೇಳಿದ ಈ ಮಾತು ಸಾಕ್ಷಿಯಾಗಿದೆ. "ನಾನು ತಂದ ಸುಧಾರಣೆ ಮಸೂದೆಗೇನಾದರೂ ಸೋಲುಂಟಾದರೆ ನಾನು ಈ ದೇಶದೊಡನೆ ನನಗಿದ್ದ ಸಂಬಂಧವನ್ನೆ ಬಿಟ್ಟುಬಿಡುತ್ತಿದ್ದೆ. ದೇವರ ದಯೆಯಿಂದ ಹಾಗಾಗಲಿಲ್ಲ. ಈ ದೇಶವೊಂದರಲ್ಲೇ ಅಲ್ಲದೆ ಇಡೀ ಜಗತ್ತಿನ ಮುಕ್ತಿಯನ್ನು ಕಾಣುವ ಅಪಾರ ಸಂತೋಷ ನನ್ನದಾಗಿದೆ." ಇಂಥ ಮಹಾನ್ ವ್ಯಕ್ತಿ ಜನಿಸಿದ ಭಾರತದಲ್ಲಿ ನಾವಿರುವುದೇ ಒಂದು ಪುಣ್ಯ.

ರವೀಂದ್ರನಾಥ ಟಾಗೋರ್

ಭಾರತದ ಏನೆಲ್ಲ ಸಾಂಸ್ಕೃತಿಕ ವೈಭವವಿದೆಯೋ, ಏನೆಲ್ಲ ಪ್ರಾಚೀನತಮ ಜ್ಞಾನವಿದೆಯೋ ಅದರ ಪ್ರತಿನಿಧಿಯಾಗಿ ರವೀಂದ್ರನಾಥ ಟಾಗೋರರಿದ್ದರು. ರವೀಂದ್ರನಾಥ ಟಾಗೋರ್ ಗತಿಸಿ ೬೩ ವರ್ಷಗಳಾಗಿದ್ದರೂ ಸಹ ತಮ್ಮ ಅಪೂರ್ವವಾದ ಸಾಹಿತ್ಯಕೃತಿಗಳ ಕಾರಣದಿಂದಾಗಿ ಅವರು ಭಾರತೀಯರ ಮಾನಸದಲ್ಲಿ ಚಿರಸ್ಥಾಯಿಯಾದ ಸ್ಥಾನವನ್ನು ಪಡೆದಿದ್ದಾರೆ. ಕವಿಗಳು ದ್ರಷ್ಟಾರರೆಂಬ ಮಾತು ರವೀಂದ್ರರಿಗೆ ಶತಶಃ ಅನ್ವಯಿಸುತ್ತದೆ. ಅವರು ತಮ್ಮ ಅಪಾರ ಸಂಖ್ಯೆಯ ಕವಿತೆಗಳ ಮೂಲಕ, ನೂರಾರು ಕಥೆ ಕಾದಂಬರಿಗಳ ಮೂಲಕ ಮಾನವಕುಲಕ್ಕೆ ಕೊಟ್ಟಿರುವ ಸಂದೇಶವು ೨೧ನೇ ಶತಮಾನದ ಈ ಭರಾಟೆಯ ಕಾಲದಲ್ಲಿಯೂ ಸಹ ಪ್ರಳಯಕಾಲದಲ್ಲಿ ಆಲದ ಎಲೆಯ ಮೇಲೆ ತೇಲಿಬರುವ ಕೃಷ್ಣನಂತೆ ನಮ್ಮ ಬಳಿಗೆ ಬರುತ್ತದೆ. ಆದರೆ ಅದನ್ನು ಎತ್ತಿಕೊಂಡು ನಲಿದಾಡುವ ಭಾಗ್ಯ ನಮ್ಮದಾಗಬೇಕಾಗಿದೆಯಷ್ಟೆ. ಆದರೆ ಆ ಭಾಗ್ಯ ಇಂದಿನ ಸ್ಪೀಡ್ ಮತ್ತು ಗ್ರೀಡ್ ಯುಗದಲ್ಲಿ ಸಾಧ್ಯವಿಲ್ಲವೆಂದು ಯಾರಿಗಾದರೂ ಅನಿಸುತ್ತದೆ. ಎಲ್ಲಕ್ಕಿಂತಲೂ ದುರ್ದೈವದ ಸಂಗತಿಯೆಂದರೆ ಉಪನಿಷತ್ತಿನ ಸಚಿತ್ರ ಸಂಪುಟದಂತಿದ್ದ ರವೀಂದ್ರರಂಥ ಇನ್ನೊಬ್ಬ ಕವಿ ಈ ಶತಮಾನದಲ್ಲಿ ಹುಟ್ಟಲಾರ. ಏಕೆಂದರೆ ವಿಶ್ವಮಟ್ಟದ ಕವಿಯೊಬ್ಬ ನಾಡಿನ ಪುಣ್ಯದಿಂದ ಹುಟ್ಟುತ್ತಾನಾದರೂ ಅಂಥ ಕವಿಯನ್ನು ಅಂತಿಮವಾಗಿ ರೂಪಿಸುವಂಥದು ಆ ನಾಡಿನ ಜನರೂ ಮತ್ತು ಜೀವನವೂ ಎಂಬ ವಾಸ್ತವ ಸಂಗತಿಯನ್ನು ಮರೆಯಲಾಗದು. ಆದರೆ ಈಗ ನಮ್ಮ ಸಮಾಜದಲ್ಲಿ ವಿಶ್ವಕವಿ ರವೀಂದ್ರನಾಥರಂಥವರನ್ನು ಸೃಷ್ಟಿಸುವ ಪರಿಪಾಕ ಇಲ್ಲವಾಗಿದೆ. ಇಂದಿನ

ಪರಿಸರ ಹಾಗೂ ಮೌಲ್ಯಗಳ ಪ್ರಭಾವವನ್ನು ಹೊತ್ತುಕೊಂಡ ಕವಿಯೊಬ್ಬ ಹುಟ್ಟಿಬರಬಹುದು, ಆದರೆ ಭರತ ಭೂಮಿಯ ಮಣ್ಣಿನ ಕಣಕಣಗಳಲ್ಲಿರುವ ಸತ್ಯಂ–ಶಿವಂ–ಸುಂದರಂನ ಸಾಂಸ್ಕೃತಿಕ ಪ್ರಭಾವವನ್ನು ಹೊತ್ತುಕೊಂಡು ಬರುವ ಸಹಜ ಕವಿ, ಮುಗ್ಧಕವಿ, ಸೃಷ್ಟಿಕವಿ, ರಾಷ್ಟ್ರಕವಿಯೊಬ್ಬ ಹುಟ್ಟಿಬರಬಲ್ಲನೇ ಎಂಬುದು ಭಾರತೀಯರ ಕೊರಗು. ಏಕೆಂದರೆ ಇಂದಿನ ಜೀವನದ ಓಘ ನಗರದತ್ತ. ಹಳ್ಳಿಗಳ ಸಮಾಧಿಯ ಮೇಲೆ ನಗರದ ಸೌಧಗಳ ನಿರ್ಮಾಣವಾಗುತ್ತಿರುವಾಗ "ದೇವರು ಗ್ರಾಮವನ್ನು ಸೃಷ್ಟಿಸಿದ, ಸೃಷ್ಟಿಸಿದ ನಗರವನ್ನು ಮಾನವ" ಎಂದು ರವೀಂದ್ರನಾಥರು ಹಾಡಿದಂಥ ಭಾವನೆಯ ಅರ್ಥವುಳ್ಳ ಕವನಗಳನ್ನು ಇಂದಿನ ಕವಿಗಳು ಹಾಡಬಲ್ಲರೆ? ಹಾಡಲು ಸಾಧ್ಯವಿಲ್ಲ. ಏಕೆಂದರೆ ಇಂದಿನ ಯಾವ ಪ್ರಬುದ್ಧ ಕವಿಯೂ, ಸಾಹಿತಿಯೂ, ಚಿಂತಕನೂ ಗ್ರಾಮಗಳಲ್ಲಿಲ್ಲ. ಗ್ರಾಮಗಳಲ್ಲಿ ಒಂದು ವೇಳೆ ಇದ್ದರೂ ಅವರ ಜೀವನ ನಗರಾಭಿಮುಖವಾಗಿದೆ. ಇಂಥ ಪರಿಸ್ಥಿತಿಯಲ್ಲಿ ರವೀಂದ್ರರು ಗ್ರಾಮಿಗರ ಜೀವನದಲ್ಲಿ ತರಬಯಸಿದ್ದ ಸಂತೋಷವನ್ನಾರು ತರಬಲ್ಲರು? ಟಾಗೋರರು ತಮ್ಮ ಮಾತೃಭಾಷೆ ಮತ್ತು ಪ್ರದೇಶ ಭಾಷೆ ಬಂಗಾಳಿಯನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಮಕ್ಕಳಿಗೆ ವಿದ್ಯಾಭ್ಯಾಸ ಅವರವರ ಮಾತೃಭಾಷೆಯಲ್ಲಿಯೇ ದೊರೆಯಬೇಕೆಂದು ಬಯಸಿದ್ದರು. ರವೀಂದ್ರರ ಜೀವನ ರೂಪಿತವಾದದ್ದೇ ಬಂಗಾಳಿಯಲ್ಲಿ. ರವೀಂದ್ರರೆಂದರೇನೆ ಬಂಗಾಳಿ, ಬಂಗಾಳಿಯೆಂದರೇನೆ ರವೀಂದ್ರರು ಎಂಬಂಥ ಸಮೀಕರಣವನ್ನು ಅವರು ಭಾಷೆ ಮತ್ತು ವ್ಯಕ್ತಿಯ ಮಧ್ಯೆ ನಿರ್ಮಿಸಿದ್ದರು. ಆದರೆ ನಮ್ಮನ್ನು ಈಗ ಚಿಂತೆಗೀಡು ಮಾಡಿರುವ ಸಂಗತಿಯೇ ಇದು. ಇಂಥ ಸಮೀಕರಣ ಈಗ ಪ್ರಚಾರದಲಿಲ್ಲವಲ್ಲ ಎಂಬುದು ಸ್ವತಂತ್ರರಾದ ಭಾರತೀಯರು ಇದುವರೆಗೂ ಈ ಸಮೀಕರಣವನ್ನು ಅರ್ಥಮಾಡಿಕೊಂಡಿರದೇ ಇರುವುದು. ಇಂದಿಗೂಸಹ ಆಧುನಿಕತೆಯ ಹೆಸರಿನಲ್ಲಿ ದೇಶದ ಮುಗ್ಧ ಮಕ್ಕಳ ಕೊರಳಿಗೆ ಪರಭಾಷೆಯ ಬೀಸುವಕಲ್ಲನ್ನು ಕಟ್ಟಿ ಅವರನ್ನು ಅರ್ಥವಿಹೀನ ಜೀವನ ಸಾಗರದಲ್ಲಿ ಮುಳುಗಿಸುತ್ತಿದ್ದೇವೆ. ರವೀಂದ್ರರು ಮಕ್ಕಳನ್ನು ಇಂಥ ದುಷ್ಟ ಪದ್ಧತಿಯಿಂದ ಬಿಡುಗಡೆ ಮಾಡಲೆಂದೇ ಶಾಂತಿನಿಕೇತನ ಮತ್ತು ವಿಶ್ವಭಾರತಿಯಂಥ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದರು. ಈ ವಿದ್ಯಾಕೇಂದ್ರಗಳನ್ನು ಸ್ಥಾಪಿಸುವ ಮೊದಲು ಅವರು ಬಾಲಕರಾಗಿದ್ದಾಗ ಅನುಭವಿಸಿದ್ದ ಶಾಲೆಯೆಂಬ ಸೆರೆಯ ಅನುಭವಗಳ ನೆನಪು ಅವರನ್ನು ಕಾಡಿತ್ತು. ಈ ಸಂಗತಿಯನ್ನು ರವೀಂದ್ರರ ಮಾತುಗಳಲ್ಲಿಯೇ ಕೇಳೋಣ. "ಹೊಸಕಾಲದ ವಿದ್ಯಾಭ್ಯಾಸ ಎನ್ನುವುದು ವಿದ್ಯಾರ್ಥಿಗಳಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯನ್ನು ಹೊರಗೆತರಲು ಸಹಾಯ ಮಾಡದೆ, ಅವರಿಗೆ

ಬೇಡವಾದುದನ್ನು ಒಳಕ್ಕೆ ಗಿಡಿಯುವ ಒಂದು ಸಾಧನವಾಗಿದೆ. ಪಾಠಶಾಲೆಗಳು ನಿಜವಾದ ವಜ್ರಗಳನ್ನು ಹಾಳುಮಾಡಿ ಕೃತಕ ವಜ್ರಗಳನ್ನು ತಯಾರಿಸುವ ಕುಲುಮೆಗಳಾಗಿವೆ".

ತಾವು ಅನುಭವಿಸಿದ ಶಾಲೆಯೆಂಬ ಸೆರಮನೆಗಳು ಭವಿಷ್ಯದ ಮಕ್ಕಳಿಗೆ ತಪ್ಪಲೆಂಬ ಅವರ ಹಾರೈಕೆಯೇ ವಿಶ್ವನಿಕೇತನ ಮತ್ತು ವಿಶ್ವಭಾರತಿಗಳ ರೂಪದಲ್ಲಿ ಮೂರ್ತಿವೆತ್ತಿದವಾದರೂ ನಮ್ಮ ದೇಶದ ಬಹುಸಂಖ್ಯಾತ ಶಾಲೆ-ಕಾಲೇಜುಗಳು-ವಿಶ್ವವಿದ್ಯಾನಿಲಯಗಳು ಇಂದಿಗೂ ಬಹುಪಾಲು ಮಕ್ಕಳಿಗೆ ಸೆರಮನೆಯಾಗಿಯೇ ಇವೆ. ದುಃಖದ ಸಂಗತಿಯೇನೆಂದರೆ ಈ ವಿದ್ಯಾಕೇಂದ್ರಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಸೆರೆಮನೆಗಳನ್ನಾಗಿ ಹೇಗೆ ಮಾಡಬೇಕೆಂಬುದರ ಕಡೆಗೇ ಎಲ್ಲರ ಗಮನ ಮತ್ತು ಪ್ರಯತ್ನಗಳಿವೆಯೇ ಹೊರತು ಮಕ್ಕಳನ್ನು ಅವುಗಳಿಂದ ಬಿಡುಗಡೆ ಮಾಡುವ ಯೋಚನೆಯೇ ಎಲ್ಲಿಯೂ ಇಲ್ಲವಾಗಿದೆ. ರವೀಂದ್ರರ ಜೀವನವೆಲ್ಲ, ಅವರ ಕನಸು ಮತ್ತು ಭಾವನೆಗಳೆಲ್ಲ ಹಾಗೂ ವಿಚಾರಗಳೆಲ್ಲ ಜೀವನದ ಪ್ರಫುಲ್ಲ ಅರಳುವಿಕೆಗೆ ಸಂಬಂಧಿಸಿದ್ದಾಗಿದೆ. ಅವರು ಯಾಂತ್ರಿಕ ರೀತಿಯ ಜೀವನವನ್ನು, ಸದ್ದುಗದ್ದಲವನ್ನು ಬಹುವಾಗಿ ತಿರಸ್ಕರಿಸಿದ್ದರು. ಆದ್ದರಿಂದಲೇ ಅವರಿಗೆ ತಮ್ಮ ಸುತ್ತಲಿನ ಪ್ರತಿಯೊಂದು ಜೀವಿಯಲ್ಲಿಯ, ವಸ್ತುವಿನಲ್ಲಿಯ ಅರ್ಥ ಶೋಧಿಸಲು, ಸೌಂದರ್ಯ ಕಾಣಲು ಸಾಧ್ಯವಾಯಿತು. ಇಂದು ಏಷ್ಯಾ ಖಂಡದಲ್ಲೇ ದೊಡ್ಡದೆಂದು ಖ್ಯಾತಿಯನ್ನು ಪಡೆದಿರುವ ಕಲ್ಕತ್ತ ನಗರ ಹಿಂದೆ ಎಷ್ಟು ಶಾಂತ ಮತ್ತು ಎಷ್ಟು ಸಜೀವವಾಗಿತ್ತೆಂಬುದನ್ನು ರವೀಂದ್ರರು ಹೀಗೆ ಬರೆದಿದ್ದಾರೆ "ಅಂದಿನ ಕೋತಿ ಆಡಿಸುವವರೂ, ಕರಡಿಕುಣಿಸುವವರೂ ಈಗ ಕಾಣಿಸುತ್ತಿಲ್ಲ, ಇಂದ್ರಜಾಲಿಗರೂ, ಯಕ್ಷಿಣಿಗಾರರೂ, ಅವರ ತಮ್ಮಟೆಯ ಸದ್ದು ಇಂದಿನ ಕಲ್ಕತ್ತೆಯ ಬೀದಿಗಳಲ್ಲಿಲ್ಲ. ಅದರ ಬದಲಿಗೆ ಅವಸರವಾಗಿ ಧಾವಿಸುವ ಜನಜಂಗುಳಿಯೂ, ಲಾರಿ, ಕಾರು, ಬಸ್ಸು ಟ್ರಾಮುಗಳ ಸದ್ದೂ ತುಂಬಿವೆ. ಹೀಗೆ ಒಂದೇ ಎರಡೇ? ಯಾವುದಕ್ಕೆ ಹೋಲಿಸಿದರೂ ಯಾವುದನ್ನು ನೆನೆಸಿದರೂ ಅಂದಿನ ಸೊಗಸು ಕಾಣಬರದು. ಅಂದಿನ ದಿನಗಳೆಂದರೆ ಇವತ್ತು ಮರೆತುಹೊದ ಕಥೆಗಳಂತಾಗಿದೆ. ಅ ದಿನಗಳ ವರ್ಣ ಸಂಭ್ರಮವಾಗಲೀ ಸ್ವನಸಂಚಯವಾಗಲೀ ಇಂದು ಕಾಣಿಸುವುದಿಲ್ಲ, ಕೇಳಿಸುವುದಿಲ್ಲ. ದಿನಗಳೊ ಶುಷ್ಕ, ರಾತ್ರಿಗಳೋ ನಿಸ್ಸಾರ. ಇಂದಿನ ಕಲ್ಕತ್ತೆಯನ್ನು ನೋಡಿ ಶತಮಾನಗಳ ಹಿಂದಿನದನ್ನು ನೆನೆದಾಗ ಅದೇ ಒಂದು ಬೇರೆಯಾದ, ಮತ್ತೆ ಬಾರದ ಲೋಕವೆಂಬ ಅನುಭವವಾಗುತ್ತದೆ" ರವೀಂದ್ರರ ಈ ಮಾತು ಇಂದಿನ ಕಲ್ಕತ್ತಾ ನಗರಕ್ಕೆ ಮಾತ್ರ ಅನ್ವಯಿಸುವುದಿಲ್ಲ. ದೇಶದ ಎಲ್ಲ ಮಹಾ ನಗರಗಳಿಗೂ ಅನ್ವಯಿಸುತ್ತದೆ. ಹಳ್ಳಿಗಳು

ಬಡವಾಗುತ್ತಿವೆ; ನಗರಗಳು ಶ್ರೀಮಂತವಾಗುತ್ತಿವೆ, ನಗರಕ್ಕೆ ಜನರ ವಲಸೆ ದಿನೇ ದಿನೇ ಹೆಚ್ಚಾಗುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸಲಿಕಗಕ್ಕಾಗಲೀ, ತಡೆಯುವುದಕ್ಕಾಗಲೀ, ಕಳೆದ ಹತ್ತು ಪಂಚವಾರ್ಷಿಕ ಯೋಜನೆಗಳು ವಿಫಲವಾಗಿವೆ; ಮುಂದಿನ ಯೋಜನೆಗಳೂ ಸಫಲಗೊಳ್ಳುವವೆಂಬ ಯಾವ ಸೂಚನೆಗಳೂ ಕಾಣುತ್ತಿಲ್ಲ. ಹೀಗಿರುವಾಗ ರವೀಂದ್ರರ ಮತ್ತು ಇತರ ಕವಿಗಳ ಕೋಮಲ ಭಾವನೆಗಳೆಲ್ಲ ಯಂತ್ರದ ಕರ್ಕಶ ಧ್ವನಿಯಲ್ಲಿ ಅಡಗಿ ಹೋದರೆ ಯಾರು ಕಾರಣರು? ಇಂಥ ಪರಿಸ್ಥಿತಿ ಜಗಕ್ಕೆ ಬರುವುದೆಂದರಿತೋ ಏನೋ ರವೀಂದ್ರರು ಅಂದೇ ಈ ರೀತಿ ಬಿಸುಸುಯ್ದಿದ್ದಾರೆ;

ಬೆಳಕು ಹರಿದಿಹುದು
ದೀಪ ಅಳಿದಿಹುದು
ನನ್ನ ಕತ್ತಲೆ ಗೂಡಲಿ
ಕರೆಬಂದಿಹುದು ಸಖರೆ
ಬೀಳ್ಕೊಡಿರೆನ್ನನು.

ರವೀಂದ್ರರು ಪ್ರಕೃತಿ ಪ್ರೇಮಿಯಾಗಿದ್ದಷ್ಟೇ ದೇಶ ಪ್ರೇಮಿಯೂ ಆಗಿದ್ದರು. ಆದರೆ ಅವರ ದೇಶಪ್ರೇಮ ಎಂದೂ ಕುರುಡಾಗಿರಲಿಲ್ಲ. ಅವರ ದೇಶಪ್ರೇಮ ವರ್ತುಲೋತ್ತರವಾಗಿ ಬೆಳೆಯುತ್ತಾ ವಿಶ್ವಮಾನವೀಯತೆಯತ್ತ ಸಾಗುತ್ತಿತ್ತು. ಆದ್ದರಿಂದ ೧೯೧೫ ರಲ್ಲಿ ಗಾಂಧೀಜಿ ಪ್ರಾರಂಭಿಸಿದ್ದ ಅಸಹಕಾರ ಆಂದೋಲನ ರವೀಂದ್ರರಿಗೆ ಇಷ್ಟವಾಗಲಿಲ್ಲ. ಅಷ್ಟೇ ಅಲ್ಲ ಅದನ್ನು ವಿರೋಧಿಸಿದರೂ ಕೂಡ. ಸ್ವದೇಶಿ ಚಳುವಳಿ ಹೇಗೆ ಭಾರತೀಯನ ಮನಸ್ಸನ್ನು, ಬುದ್ಧಿಯನ್ನು ಮತ್ತು ಹೃದಯವನ್ನು ವಿಶ್ವಸಂಪರ್ಕದಿಂದ ದೂರ ಮಾಡುತ್ತದೆಂಬುದನ್ನು ಗಾಂಧೀಜಿಯವರಿಗೆ ತಿಳಿಸಲು ಪ್ರಯತ್ನಿಸಿದರು. ದೇಶದ ಸ್ವಾತಂತ್ರ್ಯದ ಇತಿಹಾಸದಲ್ಲಿ ಅಸಹಕಾರ ಚಳುವಳಿಗೆ ಬಹು ಮಹತ್ವದ ಸ್ಥಾನವಿದೆ. ಈ ಚಳುವಳಿಯ ಪ್ರಭಾವ ದೇಶದ ಇಡೀ ಜನಮಾನಸದ ಮೇಲೆ ಪ್ರಭಾವ ಬೀರುತ್ತ ಚಳುವಳಿಯ ಮುಂದಿನ ಹೆಜ್ಜೆಗಳನ್ನು ತೀವ್ರಗೊಳಿಸಿತು. ಅಸಹಕಾರ ಚಳುವಳಿಯನ್ನು ಗಾಂಧೀ ಮತ್ತು ಟಾಗೋರ ತಮ್ಮ ತಮ್ಮ ನೆಲೆಯಲ್ಲಿ ಅರ್ಥೈಸಿಕೊಂಡರಾದರೂ ದೇಶದ ಹಿತದ ಪ್ರಶ್ನೆ ಬಂದಾಗ ಅವರಿಬ್ಬರ ವಿಚಾರಗಳ ಪ್ರಯಾಗವುಂಟಾಯಿತು.

ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಗಾಂಧೀಜಿ ದೇಶದ ಯುವಕರಿಗೆ ಇಂಗ್ಲೀಷರ ಶಾಲಾ, ಕಾಲೇಜುಗಳ ಬಹಿಷ್ಕಾರಕ್ಕೆ ಕರೆಕೊಟ್ಟಿದ್ದರು. ಆಗ ಕೆಲವು ವಿದ್ಯಾರ್ಥಿಗಳು ಬಂದು ರವೀಂದ್ರರನ್ನು ಭೇಟಿಮಾಡಿ ಈ ಬಗ್ಗೆ ಅವರ ಅಭಿಪ್ರಾಯವನ್ನು ಕೇಳಿದಾಗ ಟಾಗೋರರು ಶಾಲಾ ಬಹಿಷ್ಕಾರವನ್ನು ವಿರೋಧಿಸಿದ್ದರು. ನಂತರ ಆ ಯುವಕರು ಟಾಗೋರರ ಮೇಲೆ ಕೋಪಿಸಿ

ಕೊಂಡು ಹೊರಟುಹೋದರು. ತಮ್ಮ ದೇಶಾಭಿಮಾನದ ಬಗ್ಗೆ ಈ ಯುವಕರಿಗೆ ಅನುಮಾನ ಉಂಟಾಗಿದೆ ಎಂದು ಭಾವಿಸಿ ಅವರಿಗೆ ಹೀಗೆ ಹೇಳಿದರು. "ಈ ಆಂದೋಲನ ಜನಪ್ರಿಯಗೊಳ್ಳುವ ಎಷ್ಟೋ ಮುಂಚೆ ಒಂದು ಸ್ವದೇಶಿಮಳಿಗೆ ಪ್ರಾರಂಭಿಸಲು ೧೦೦೦ ರೂಪಾಯಿ ಕೊಟ್ಟಿದ್ದೆ. ಆಗ ನನ್ನದೆಂಬ ೫ ರೂಪಾಯಿ ಸಹ ಇರಲಿಲ್ಲ ಅದರಿಂದಾಗಿ ನಾನು ಕಡು ಬಡತನ ಮತ್ತು ದಿವಾಳಿತನ ಅನುಭವಿಸಿದೆ" ಹೀಗೆ ರವೀಂದ್ರರ ದೇಶಭಕ್ತಿ ಕಾವ್ಯದ ಮೇಲಿನ ಪ್ರೇಮಕ್ಕಿಂತಲೂ ಹೆಚ್ಚಾಗಿತ್ತು. ರವೀಂದ್ರರು ಹೇಳಿದ ಈ ಮಾತುಗಳು ಅವರ ದೇಶಾಭಿಮಾನದ ಕೆಚ್ಚನ್ನು ತೋರುತ್ತದೆ. "ಸ್ವಾವಲಂಬನೆ ಇಲ್ಲದ ಯಾವ ಚಳುವಳಿಯೂ ಅರ್ಥಶೂನ್ಯ. ಬೇಡುವವನು ವ್ಯಕ್ತಿಯಾದರೇನು, ದೇಶವಾದರೇನು? ಬೇಡುವುದು ಭಿಕ್ಷೆಯೆ! ನಮಗೆ ಬೇಕಾದುದನ್ನೆಲ್ಲ ಬ್ರಿಟೀಷರಿಂದ ಪಡೆಯಬಹುದು. ಆದರೆ ಸ್ವಾವಲಂಬನೆಯನ್ನು ಬೇಡುವುದು ಸಾಧ್ಯವೆ?"

ರವೀಂದ್ರರ ಸಾಹಿತ್ಯ ಅವರ ಜೀವಿತ ಕಾಲದಲ್ಲಿಯೇ ಜಗದ್ವಿಖ್ಯಾತವಾಗಿತ್ತು. ಆಗ ಇಟಲಿ ದೇಶದ ಸರ್ವಾಧಿಕಾರಿಯೂ ಸಹ ರವೀಂದ್ರರ ಸಾಹಿತ್ಯವನ್ನು ಇಟಲಿ ಭಾಷೆಯಲ್ಲಿಯೆ ಓದಿ ಪ್ರಭಾವಿತಗೊಂಡಿದ್ದ. ರೋಮ್ ನಗರಕ್ಕೆ ರವೀಂದ್ರರು ಬಂದಾಗ ಸ್ವತಃ ಮುಸಲೋನಿಯೆ ಸ್ವಾಗತಿಸಿ "ನಾನೊಬ್ಬ ನಿಮ್ಮ ಇಟಾಲಿಯನ್ ಅಭಿಮಾನಿ" ಎಂದು ಹೇಳಿದ. ರವೀಂದ್ರರ ದೇಶ ಪ್ರೇಮ ಎಷ್ಟು ಗಾಢವಾಗಿತ್ತೆಂದರೆ ೧೯೧೯ರಲ್ಲಿ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ನಡೆದಿದ್ದರಿಂದ ರವೀಂದ್ರರು ತಮಗೆ ಇಂಗ್ಲಿಷ್ ಸರ್ಕಾರ ಕೊಟ್ಟಿದ್ದ 'ನೈಟ್ ಹುಡ್' ಪ್ರಶಸ್ತಿಯನ್ನು ಹಿಂದಿರುಗಿಸುತ್ತಾ ಗೌರವ ಪದಕಗಳು ನಾಚಿಕೆಗೀಡಾಗುವ ಕಾಲ ಬಂದಿದೆಯೆಂದೂ, ಎಲ್ಲ ಗೌರವಗಳನ್ನು ತ್ಯಜಿಸಿ ಮೂಕವೇದನೆಯಲ್ಲಿ ನರಳುತ್ತಿರುವ ತಮ್ಮ ದೇಶಬಾಂಧವರೊಂದಿಗೆ ನಿಲ್ಲುವುದಾಗಿಯೂ ವೈಸ್‌ರಾಯ್‌ಗೆ ಬರೆದರು. ಇಂದು ನಮ್ಮ ದೇಶದಲ್ಲಿ ಬಡತನ, ನಿರುದ್ಯೋಗ, ನಿರಕ್ಷರತೆ, ಅಸಮಾನತೆ, ಧರ್ಮಾಂಧತೆ, ಜಾತಿ ವಿದ್ವೇಷ, ಹಿಂಸೆ ಇತ್ಯಾದಿಗಳು ತುಂಬಿರುವಾಗ ಭಾರತರತ್ನ, ಭಾರತಭೂಷಣ, ಭಾರತವಿಭೂಷಣ ಪದವಿಗಳು ಎಷ್ಟು ಅರ್ಥವಿಹೀನವೆಂದು ತೋರುತ್ತದೆ. ಆದರೂ ಸಹ ಇಂತಹ ಪದವಿಗಳನ್ನು ಸರ್ಕಾರ ಕೊಡುತ್ತದೆ. ಜನರು ಸ್ವೀಕರಿಸುತ್ತಾರೆ, ಈ ವಿಷಯದಲ್ಲಿ ರವೀಂದ್ರನಾಥ್ ಟಾಗೋರರು ನಮಗೆ ಉತ್ತಮ ಉದಾಹರಣೆಯಾಗಬಲ್ಲರು. ಅದರೆ ಇದನ್ನು ಅರಿಯಬಲ್ಲವರಾರು? ಇದೆಲ್ಲಕ್ಕಿಂತ ಹೆಚ್ಚಾಗಿ ಅವರು ಬರೆದಿರುವ ರಾಷ್ಟ್ರಗೀತೆಯಲ್ಲಿಯ ಆಶಯದಂತೆ ದೇಶದ ಸಮಾಜವನ್ನು ರೂಪಿಸಬೇಕಿದೆ. ಹಾಗೇನಾದರೂ ಸಾಧ್ಯವಾದಲ್ಲಿ ಭಾರತ ಪ್ರಪಂಚದ

ಮಹಾನ್ ಶಕ್ತಿಯಾಗಿ ಹೊರಹೊಮ್ಮುವುದರಲ್ಲಿ ಸಂದೇಹವಿಲ್ಲ. ಅವರ ಜನ್ಮತಿಂಗಳ ಸಂದರ್ಭದಲ್ಲಿ ಅವರು ರಚಿಸಿರುವ ರಾಷ್ಟ್ರಗೀತೆಯನ್ನಾದರೂ ಪಠಣಮಾಡೋಣ;

ಎಲ್ಲಿ ಮನ ನಿರ್ಭೀತ
ಎಲ್ಲಿ ಶಿರ ನಿಮಿರಿ ನಿಂದಿಹುದೊ
ಎಲ್ಲಿ ಜ್ಞಾನನಿರಾತಂಕ
ಎಲ್ಲಿ ಜಗ ಸಂಕುಚಿತ ಭಿತ್ತಿಗಳ ದೆಸೆಯಿಂದ
ನುಚ್ಚು ನೂರಾಗಿ ಒಡೆದಿಲ್ಲವೋ
ಎಲ್ಲಿ ನುಡಿ ಸತ್ಯದಂತರಾಳದಿಂದಲಿ ಹೊಮ್ಮುವುದೊ
ಎಲ್ಲಿ ದಣಿಯದ ಕಾರ್ಯಪೂರ್ಣತೆಗೆ ಕೈಚಾಚಿನಿಂತಿಹುದೊ
ಎಲ್ಲಿ ವಿವೇಚನೆಯ ಸ್ವಚ್ಛತೊರೆ ಜಡಸಂಪ್ರದಾಯದ
ಮರಳು ಬೀಳಿನಲಿ ಇಂಗಿಲ್ಲವೊ
ಎಲ್ಲಿ ಮನವನು ನೀನು ಹಬ್ಬಿ ಹರಡುವ
ಚಿಂತನಾಕಾರ್ಯಗಳಲಿ ಕರೆದೊಯ್ಯುತಿಹೆಯೋ
ಅಲ್ಲಿ, ಆ ಸ್ವಾತಂತ್ರ್ಯನಂದನದಿ, ಈ ನನ್ನ ರಾಷ್ಟ್ರವನು
ಎಚ್ಚರಿಸು, ಹೇ ತಂದೆ.

ಗೋಪಾಲಕೃಷ್ಣ ಗೋಖಲೆ

ಭಾರತದ ಸಾರ್ವಜನಿಕ ಜೀವನದಲ್ಲಿ ಗೋಪಾಲಕೃಷ್ಣ ಗೋಖಲೆಯವರಿಗೆ ಬಹಳ ಮಹತ್ವದ ಸ್ಥಾನವಿದೆ. ಈ ಮಹಾನುಭಾವರ ವ್ಯಕ್ತಿತ್ವದ ವಿಶೇಷತೆಯೇನೆಂದರೆ ಇವರ ಆಚಾರ-ವಿಚಾರಗಳು ಸ್ವಾತಂತ್ರ್ಯ ಪೂರ್ವದಲ್ಲೂ ಉಪಯೊಗಕ್ಕೆ ಬಂದವಲ್ಲದೆ, ಸ್ವಾತಂತ್ರ್ಯಾ ನಂತರದ ಒಳ್ಳೆಯ ರಾಜಕೀಯತತ್ವ, ಬೆಳವಣಿಗೆಗೂ ಉಪಯೋಗಕ್ಕೆ ಬರುವಂಥಾದ್ದಾಗಿವೆ. ಇನ್ನೊಂದು ಬಹಳ ವಿಶೇಷತೆಯೇನೆಂದರೆ ಇವರನ್ನು ಮಹಾತ್ಮಗಾಂಧಿ ತಮ್ಮ ರಾಜಕೀಯಗುರುವೆಂದು ಸ್ವೀಕರಿಸಿದ್ದು. ಅನೇಕಸಲ ಯೋಗ್ಯ ಶಿಷ್ಯನ ಕಾರಣದಿಂದಾಗಿ ಗುರುವಿಗೆ ಉನ್ನತ ಸ್ಥಾನ ದೊರೆಯುತ್ತದೆ ಮತ್ತು ಆ ಸ್ಥಾನ ಚ್ಯುತಿಯಿಲ್ಲದೆ ಉಳಿಯುತ್ತದೆ. ಅಂಥ ಪ್ರಸಂಗ ಗಾಂಧೀ ಮತ್ತು ಗೋಖಲೆಯವರ ಗುರು-ಶಿಷ್ಯ ಸಂಬಂಧದಲ್ಲಿ ಕಾಣಬಹುದು. ಸಾರ್ವಜನಿಕ ಜೀವನ ಶುದ್ದವೂ, ಪ್ರಾಮಾಣಿಕವೂ, ನಿಃಸ್ವಾರ್ಥವೂ ಆಗಿರಬೇಕೆಂಬ ವಿಚಾರದಲ್ಲಿ ಈ ಗುರು-ಶಿಷ್ಯರ ಮಧ್ಯ ಸ್ಪರ್ಧೆಯೇ ಇತ್ತೆಂದರೆ ಯಾರಿಗೆ ತಾನೆ ಆಶ್ಚರ್ಯವಾಗುವುದಿಲ್ಲ? ಗಾಂಧೀ ಸತ್ಯವನ್ನಲ್ಲದೆ ಬೇರೆಯಾರನ್ನೂ ಏನನ್ನೂ ತಮ್ಮ ಜೀವನಗತಿಯ ನಿರ್ಧಾರಕ ಶಕ್ತಿಯೆಂದು ಭಾವಿಸಿರಲಿಲ್ಲ

"ನನ್ನಂಥವರು ಸಾವಿರಾರು ಜನ ಸಾಯಲಿ, ಸತ್ಯ ಮಾತ್ರ ಉಳಿಯಲಿ" ಎಂದು ಹೇಳಿದ ಗಾಂಧೀ ಗೋಖಲೆಯವರನ್ನು ತಮ್ಮ ರಾಜಕಿಯ ಗುರುವೆಂದು ಸ್ವೀಕರಿಸಿದ ಸಂಗತಿಯೇ ಅದ್ಭುತವಾದ ಮತ್ತು ಅಸಾಧಾರಣವಾದ ಘಟನೆ. ಈ ಗುರು–ಶಿಷ್ಯರಲ್ಲಿ ಪ್ರಥಮ ಭೇಟಿಯಾದಾಗ ಅವರಿಬ್ಬರಲ್ಲಿ ಮೂರು ವರ್ಷಗಳಷ್ಟು ಮಾತ್ರ ವ್ಯತ್ಯಾಸವಿತ್ತು. ಗೋಖಲೆಯವರು ಪುಣೆನಗರದ ಆಚೆಗೆ ಹೋಗಿರಲಿಲ್ಲ; ಯಾವ ವಿದೇಶಕ್ಕೂ ಹೋಗಿರಲಿಲ್ಲ. ಹೊರದೇಶಕ್ಕೆ ಹೋಗಿ ಅಲ್ಲಿಯ ಇಂಗ್ಲೀಷ್ ಸರ್ಕಾರದ ವಿರುದ್ಧ ನ್ಯಾಯಕ್ಕಾಗಿ, ಸಮಾನತೆಗಾಗಿ, ಹೋರಾಟಮಾಡಿ ಗಾಂಧೀಯವರಿಗಿದ್ದಂಥ ಅನುಭವ ಗೋಖಲೆಯವರಿಗೆ ಇರಲಿಲ್ಲ; ಗೋಖಲೆಯವರಂತೆ ಕಾಲೇಜಿನಲ್ಲಿ ಪಾಠ ಮಾಡಿದ ಅನುಭವ ಗಾಂಧೀಗೆ ಇರಲಿಲ್ಲ. ನ್ಯಾಯ, ಹಕ್ಕು ಇತ್ಯಾದಿಗಳ ಪ್ರಾಪ್ತಿಗಾಗಿ ಸರ್ಕಾರದೊಂದಿಗೆ ನೇರವಾದ ಸಂಘರ್ಷಕ್ಕೆ ಇಳಿಯುವ ಮನೋಧರ್ಮವನ್ನು ಗಾಂಧೀ ಹೊಂದಿದ್ದರೆ, ಗೋಖಲೆ ಸಂವಿಧಾನ ಪ್ರಿಯರೂ, ಮಿತವರ್ತಿ ಧೋರಣೆಯವರೂ ಆಗಿದ್ದರು. ಇಬ್ಬರ ಹಿನ್ನಲೆ, ಅನುಭವ ಇತ್ಯಾದಿಗಳು ಬೇರೆಯಾಗಿದ್ದರೂ ಸಹ ಅವರು ಪರಸ್ಪರ ಗುರು ಶಿಷ್ಯ ಸಂಬಂಧವನ್ನೇರ್ಪಡಿಸಿಕೊಂಡಿದ್ದು ಕೌತುಕದ ಸಂಗತಿಯೇ ಆಗಿದೆ. ಪರಸ್ಪರ ವಿರೋಧಾತ್ಮಕ ಕಾರ್ಯನುಸರಣೆಯನ್ನು ಅವರು ಹೊಂದಿದ್ದರೂ ಅವರನ್ನು ಏಕೀಕೃತಗೊಳಿಸಿದ ಮುಖ್ಯ ಅಂಶ ಸತ್ಯಾರಾಧನೆ, ಪ್ರಾಮಾಣಿಕತೆ, ಕಾರ್ಯತತ್ಪರತೆ ಮುಂತಾದ ಶ್ರೇಷ್ಠ ಗುಣಗಳು.

ಇಲ್ಲಿ ಈ ಗುರು– ಶಿಷ್ಯರ ಸಮಾಗಮದ ಮೊದಲ ಅನುಭವವನ್ನು ಗಾಂಧೀಯವರಿಂದಲೇ ತಿಳಿಯೋಣ: "ನಾನು ಗೋಖಲೆಯವರನ್ನು ನೋಡಲು ಹೋದಾಗ ಅವರು ಫರ್ಗ್ಯುಸನ್ ಕಾಲೇಜಿನ ಆವರಣದಲ್ಲಿದ್ದರು. ನನ್ನ ಹೃದಯ ಕೂಡಲೇ ಅವರಿಗೆ ಮಾರು ಹೋಯಿತು.ಅವರೊಂದಿಗೆ ಅದೇ ನನ್ನ ಪ್ರಥಮ ಭೇಟಿಯಾಗಿದ್ದಿತು. ಹಳೆಯ ಮಿತ್ರತ್ವದ ಪುನರುಜ್ಜೀವನವೋ ಎಂಬಂತೆ ತೋರಿತು. ಸರ್ ಫಿರೋಜ್ ಷಾ ನನಗೆ ಹಿಮಾಲಯದಂತೆ ಕಂಡಿದ್ದರು. ಲೋಕಮಾನ್ಯರು ಸಾಗರದಂತೆ ಕಂಡಿದ್ದರು. ಆದರೆ ಗೋಖಲೆ ಗಂಗಾನದಿಯಂತಿದ್ದರು. ಆ ಪವಿತ್ರವಾದ ನದಿಯಲ್ಲಿ ಯಾರು ಬೇಕಾದರೂ ಚೈತನ್ಯದಾಯಕ ಸ್ನಾನ ಮಾಡಬಹುದಾಗಿದ್ದಿತು. ಹಿಮಾಲಯವನ್ನು ಹತ್ತುವುದು ಸಾಧ್ಯವಿರಲಿಲ್ಲ; ಸಮುದ್ರದಲ್ಲಿ ಯಾನ ಮಾಡುವುದೂ ಸುಲಭವಲ್ಲ. ಆದರೆ ಗಂಗಾನದಿ ಎಲ್ಲರನ್ನೂ ತನ್ನ ತೊಡೆಯ ಮೇಲೆ ಆಡಲು, ಹೃದಯದಲ್ಲಿ ನಲಿದಾಡಲು ಆಹ್ವಾನಿಸುತ್ತಾಳೆ. ಗಂಗಾನದಿಯಲ್ಲಿ ಪುಟ್ಟನಾವೆಯಲ್ಲಿ ಹುಟ್ಟುಹಾಕುತ್ತಾ ಹೋಗಬಹುದು ಅದೇ ಒಂದು ಆನಂದ. ಉಪಾಧ್ಯಾಯನು, ಶಾಲೆಗೆ ಸೇರಲು ಬಂದಿರುವ ವಿದ್ಯಾರ್ಥಿಯನ್ನು

ಪರೀಕ್ಷಿಸುವಂತೆ ಗೋಖಲೆಯವರು ನನ್ನನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರು. ನಾನು ಯಾರು ಯಾರನ್ನು ನೋಡಬೇಕು, ಹೇಗೆ ನೋಡಬೇಕು ಎಂದೆಲ್ಲ ನನಗೆ ಹೇಳಿಕೊಟ್ಟರು. ನನ್ನ ಭಾಷಣವನ್ನು ಕೇಳ ಬಯಸಿದರು. ನನಗೆ ಕಾಲೇಜನ್ನೆಲ್ಲ ತೋರಿಸಿದರು. "ಯಾವಾಗ ಬೇಕಾದರೂ ನನ್ನನ್ನು ಬಂದು ನೋಡಿ. ಭಾಂಡಾರ್ಕರರನ್ನು ಸಂದರ್ಶಿಸಿದ ನಂತರ ಫಲಿತಾಂಶವನ್ನು ಬಂದು ಹೇಳಿ" ಎಂದು ನನ್ನನ್ನು ಅತ್ಯಂತ ಸುಖಿಯನ್ನಾಗಿ ಮಾಡಿ ಬೀಳ್ಕೊಟ್ಟರು. ಗೋಖಲೆಯುವರು, ಜೀವಿಸಿದ್ದಾಗಲೂ ಮತ್ತು ಈಗಲೂ ರಾಜಕೀಯ ಕ್ಷೇತ್ರದಲ್ಲಿ ನನ್ನ ಹೃದಯುದಲ್ಲಿ ಆಕ್ರಮಿಸಿದ ಸ್ಥಾನವನ್ನು ಮತ್ತಾರೂ ಆಕ್ರಮಿಸಿಲ್ಲ. ಅದು ವಿಶೇಷರೀತಿಯದಾಗಿದ್ದಿತು."

ಗಾಂಧೀ ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹಿಯಾಗಿ ಹೋರಾಟ ನಡೆಸಿ ಭಾರತಕ್ಕೆ ಬಂದಾಗ ಅವರು ಇನ್ನೂ ರಾಷ್ಟ್ರನಾಯಕರಾಗಿರಲಿಲ್ಲ.ಆದರೆ ದಕ್ಷಿಣ ಆಫ್ರಿಕಾದಲ್ಲಿ ಗಾಂಧೀ ಸಾಧಿಸಿದ್ದ ಅಭೂತಪೂರ್ವ ಕಾರ್ಯಸಿದ್ಧಿಯನ್ನು ಕಣ್ಣಾರೆ ಕಂಡು ಬಂದಿದ್ದ ಗೋಖಲೆಯವರು ಗಾಂಧೀಗೆ ಭಾರತದಲ್ಲಿ ಎಲ್ಲ ಬಗೆಯ ನೈತಿಕ ಬೆಂಬಲವನ್ನು ಕೊಟ್ಟರು. ದಕ್ಷಿಣ ಆಫ್ರಿಕಾದಲ್ಲಿಯ ಗಾಂಧೀಯವರ ಹೋರಾಟಕ್ಕೂ ಸಹ ತಮ್ಮ ನೈತಿಕ ಬೆಂಬಲ ಕೊಟ್ಟು ಗಾಂಧೀ ಅಲ್ಲಿ ವಿಜಯಿಂಯಾಗಿ ಭಾರತಕ್ಕೆ ಬರಲು ಗೋಖಲೆ ಕಾರಣವಾಗಿದ್ದರು. ಗಾಂಧೀಯವರು ನಡೆಸಿದ ಹೊರಾಟಕ್ಕೆಲ್ಲ ಗೋಖಲೆ ತಮ್ಮ ನೈತಿಕ ಬೆಂಬಲಕೊಡದೇ ಹೋಗಿದ್ದಿದ್ದರೆ ಗಾಂಧೀ ಭಾರತದ ಅಗ್ರ ಶ್ರೇಣಿಯ ನಾಯಕರಾಗಿ ರೂಪುಗೊಳ್ಳುತ್ತಿರಲಿಲ್ಲವೇನೋ.

ಭಾರತದ ಸಾರ್ವಜನಿಕ ಜೀವನಕ್ಕೆ ಗೋಪಾಲಕೃಷ್ಣ ಗೋಖಲೆಯವರ ದೊಡ್ಡ ಕಾಣಿಕೆಯೆಂದರೆ ಅವರು ಸ್ಥಾಪಿಸಿದ "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ". ಈ ಸಂಸ್ಥೆಯ ಮೂಲಕ ಪ್ರಾಮಾಣಿಕರೂ, ಶ್ರದ್ಧಾವಂತರೂ, ನಿಷ್ಠಾವಂತರೂ ಆದ ದೇಶಸೇವಕರನ್ನು ತಯಾರಿಸಬೇಕೆಂಬುದೆ ಅವರ ಉದ್ದೇಶವಾಗಿತ್ತು.

ಇಂದಿಗೂ ಸಹ ದೇಶ ಸೇವೆಗಾಗಿ ಮುಂದೆ ಬರುವ ಯುವಕರು ಗೋಖಲೆಯವರ ಜೀವನ, ವಿಚಾರ, ಶಿಸ್ತು ಇತ್ಯಾದಿಗಳನ್ನು ತಿಳಿಯುವುದು ಅಗತ್ಯವಾಗಿದೆ.

ಬರ್ಟ್ರಾಂಡ್ ರಸೆಲ್

ಇಪ್ಪತ್ತನೇ ಶತಮಾನದ ಶ್ರೇಷ್ಠ ಚಿಂತಕರಲ್ಲಿ ಒಬ್ಬರು ಬರ್ಟ್ರಾಂಡ್ ರಸೆಲ್. ಅವರು ಜೀವಿಸಿದ್ದು ಒಂದು ನೂರು ವರ್ಷ. ಅವರು ಹತ್ತೊಂಬತ್ತು ವರ್ಷದವರಾಗಿದ್ದಾಗಲೇ ತಮ್ಮ ಸ್ವಂತ ಮತ್ತು ವಿಶಿಷ್ಟ ಚಿಂತನೆಗಳಿಂದ ವೈಚಾರಿಕ ಜಗತ್ತಿನಲ್ಲಿ ಕ್ರಾಂತಿಯನ್ನುಂಟುಮಾಡಲು ಪ್ರಾರಭಿಸಿದರು. ಅವರ

ಈ ವೈಚಾರಿಕ ಕ್ರಾಂತಿ ಅವರ ಪ್ರಾಣ ಹೋಗುವ ಕೊನೆಯ ಘಳಿಗೆಯವರೆಗೂ ನಡೆಯಿತು. ಅವರಿಗೆ ೯೭ ವರ್ಷವಾಗಿದ್ದಾಗ ಅವರ ಅಭಿಮಾನಿ ಓದುಗರೊಬ್ಬರು "ರಸೆಲ್‌ರ ನಿಖರ ಲೇಖನಗಳ ಸಂಗ್ರಹ" ಎಂಬ ಪುಸ್ತಕವನ್ನು ಸಿದ್ಧಗೊಳಿಸಿ ಅದಕ್ಕೆ ಈ ಶೀರ್ಷಿಕೆ ಯುಕ್ತವೇ ಎಂದು ಕೇಳಲು ಹೋದಾಗ ರಸೆಲ್ ಬಹು ಮಾರ್ಮಿಕವೂ ಮತ್ತು ನಿತ್ಯನೂತನ ಚಿಂತನಾಶಕ್ತಿಯ ದ್ಯೋತಕವೂ ಆದ ಈ ಮಾತನ್ನು ಹೇಳಿದರು. "ನಿಖರತೆ ಎಂಬ ಪದದ ಬಳಕೆಯ ಬಗ್ಗೆ ನಾನು ಉತ್ಸಾಹಿತನಾಗಿಲ್ಲ ಏಕೆಂದರೆ ನಾನು ಇನ್ನೂ ಸತ್ತಿಲ್ಲ!" ಹೀಗೆ ರಸೆಲ್ಲರ ಯಾವುದೇ ಕೃತಿಯಲ್ಲೂ "ನಿಖರತೆ" ಎಂಬ ಶಬ್ದ ಲುಪ್ತವಾಗಿರುವುದು ಕಂಡುಬರುತ್ತದೆ, ಏಕೆಂದರೆ ರಸೆಲ್‌ರ ಪ್ರಕಾರ ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿದ ವಿಚಾರ ಅನೂಚಾನವಾಗಿ ಬೆಳೆಯುತ್ತಿರುತ್ತವಾದ್ದರಿಂದ ಆ ವಿಷಯಕ್ಕೆ ಸಂಬಂಧಿಸಿದ ಆ ವಿಚಾರ ನಿಖರವೆಂದು ಹೇಳಲು ಸಾಧ್ಯವಿಲ್ಲ. ಈ ಕಾರಣದಿಂದಾಗಿಯೇ ಅವರು ಗಣಿತಶಾಸ್ತ್ರವನ್ನು ಕುರಿತು ಬರೆದಾಗಲೂ ಆ ವಿಚಾರಗಳು ಹೊಸತಾಗಿದ್ದವು. ಗಣಿತಶಾಸ್ತ್ರದ ಬಗ್ಗೆ ಮೊದಲಿದ್ದ ವಿಚಾರಗಳ ಗಡಿದಾಟಿ ಹೊಸ ಸೀಮೆಯನ್ನು ರಸೆಲ್ ನಿರ್ಮಿಸಿದ್ದರು. ಅದೇ ರೀತಿ ಅವರ ಶಿಕ್ಷಣ ವಿಚಾರಗಳು ಅಸಾಂಪ್ರದಾಯವಾಗಿದ್ದುವಲ್ಲದೆ, ಶಿಕ್ಷಣಕ್ಕೆ ಸಂಬಂಧಿಸಿದ ಅವರ ವಿಚಾರಗಳು ಹೊಸ ದಿಗಂತದತ್ತ ಮುಖಮಾಡಿ ನಿಂತಿದ್ದವು.

ಇನ್ನು ವಿವಾಹ ಮತ್ತು ಲೈಂಗಿಕತೆಗೆ ಸಂಬಂಧಿಸಿದ ಅವರ ವಿಚಾರಗಳಂತೂ ವಿಶ್ವದಲ್ಲೆಲ್ಲ ಕೋಲಾಹಲವನ್ನುಂಟು ಮಾಡಿದವು. ನ್ಯೂಯಾರ್ಕನಂಥ ಮುಂದುವರೆದ ನಗರದಲ್ಲೂ ಅವರನ್ನು ಮತ್ತು ಭಾಷಣವನ್ನೂ ಬಹಿಷ್ಕರಿಸಲಾಯಿತು. ಇದುವರೆಗೂ ರಸೆಲ್‌ರ ಆ ವಿಚಾರಗಳನ್ನು ಸಂಪೂರ್ಣವಾಗಿ ತ್ಯಜಿಸಲಾಗಲೀ ಖಂಡಿಸಲಾಗಲೀ ಸಾಧ್ಯವಾಗಿಲ್ಲ. ವಿವಾಹ ಮತ್ತು ಲೈಂಗಿಕತೆಯ ಬಗ್ಗೆ ಮುಕ್ತವಿಚಾರ ಹೊಂದಿರುವಂತವರನ್ನು ಇಂದಿಗೂ ರಸೆಲ್‌ರ ವಿಚಾರಗಳು ಚಿಂತನೆಗೆ ಆಹ್ವಾನಿಸುತ್ತವೆ.

ರಸೆಲ್‌ರು ಈ ಯುಗದ ದೊಡ್ಡ ವ್ಯಕ್ತಿಯಾಗುವುದಕ್ಕೆ ಅತ್ಯಂತ ಪ್ರಮುಖ ಕಾರಣ ಅವರು ಅನುಸರಿಸಿದ್ದ ಯುದ್ಧ ವಿರೋಧ ನೀತಿ. ಅವರು ಈ ವಿಶ್ವವನ್ನು ಯುದ್ಧಮುಕ್ತವನ್ನಾಗಿ ಮಾಡಲು ಹೊರಟ ಮೊಟ್ಟಮೊದಲನೆಯ ಶ್ರೇಷ್ಠ ಚಿಂತಕ. ಈ ನೀತಿಯನ್ನು ಪ್ರತಿಪಾದಿಸಿದ್ದಕ್ಕಾಗಿ ಕಾರಾಗೃಹವಾಸವನ್ನೂ ಸಹ ಅನುಭವಿಸಬೇಕಾಯಿತು. ಆದರೂ ಸಹ ಅವರು ತಮ್ಮ ೧೦೦ ನೇ ವರ್ಷದ ಕೊನೆಯ ಉಸಿರನ್ನು ಎಳೆಯುವವರೆಗೂ ಮಾನವ ಕುಟುಂಬದ ಶ್ರೇಯಸ್ಸಿಗಾಗಿಯೇ ಚಿಂತನೆ ಮಾಡಿದರು. ಅವರು ಮೃತ್ಯುಶಯ್ಯೆಯಿಂದ

ಹೇಳಿದ ಮಾತು. "ನಿಮ್ಮ ಮಾನವೀಯತೆಯನ್ನು ನೆನಪಿಟ್ಟುಕೊಳ್ಳಿ; ಉಳಿದುದ್ದನ್ನು ಮರೆತುಬಿಡಿ".

೧೯೬೧ ಸೆಪ್ಟಂಬರ್ ೧೨ ನೇ ತಾರೀಖಿನ ದಿನ ರಸೆಲ್ ತಮ್ಮ ಇಳಿವಯಸ್ಸಿನಲ್ಲಿ ಟ್ರಾಫಲ್ಗಾರ್‌ಸ್ಕ್ವೇರ್‌ನಲ್ಲಿ ಸಾವಿರಾರು ಸಹಚರರೊಡನೆ ಅಂದಿನ ಸರ್ಕಾರದ ಯುದ್ಧನೀತಿಯನ್ನು ವಿರೋಧಿಸುವುದಾಗಿ ಬೀದಿಗಿಳಿದು ಯುದ್ಧ ಮುಕ್ತ ವಿಶ್ವದ ಸ್ಥಾಪನೆಯತ್ತ ದಿಟ್ಟ ಹೆಜ್ಜೆಯನ್ನಿಟ್ಟರು. ಅವರು ಆ ಸಂದರ್ಭದಲ್ಲಿ ವಿಶ್ವದ ಅನೇಕ ವಿಜ್ಞಾನಿಗಳೊಂದಿಗೆ ಸೇರಿ ಹೊರಡಿಸಿದ ಜ್ಞಾಪನಾಪತ್ರ ಇಂದಿಗೂ ಸಹ ವಿಶ್ವದ ಎಲ್ಲ ಸಾಮಾನ್ಯ ಜನರ ಹೃದಯದಲ್ಲಿರುವ ಶಾಂತಿ ಪ್ರಿಯತೆಯ ಮಿಡಿತವಾಗಿದೆ.

ರಸೆಲ್‌ರು ಗಣಿತಶಾಸ್ತ್ರಜ್ಞರಾಗಿ, ವಿಜ್ಞಾನಿಯಾಗಿ. ತತ್ವಜ್ಞಾನಿಯಾಗಿ ಸಾಮಾಜಿಕ ಚಿಂತಕರಾಗಿ. ರಾಜಕಾರಣಿಯಾಗಿ. ಸಾಹಿತಿಯಾಗಿ. ವಿಶ್ವಶಾಂತಿ ಪ್ರೇಮಿಯಾಗಿ ೧೯೭೦ ಫೆಬ್ರವರಿ ಎರಡರಂದು ತಮ್ಮ ೯೮ ನೇ ವರ್ಷದಲ್ಲಿ ತೀರಿಕೊಂಡಾಗಲೂ ಒಂದು ವಿಶ್ವದಾಖಲೆಯನ್ನೇ ಸೃಷ್ಟಿಸಿದರು!

ಕ್ರಿಸ್ತ ಪೂರ್ವ ೬೦೦ ರಲ್ಲಿ ಪಾಶ್ಚಿಮಾತ್ಯ ಜಗತ್ತಿನಲ್ಲಿ ಥೇಲ್ಸ್‌ರಿಂದ ಪಾಶ್ಚಿಮಾತ್ಯ ತತ್ವಜ್ಞಾನ ಪ್ರಾರಂಭವಾಯಿತು. ಅಂದಿನಿಂದ ಆಗಿ ಹೋದ ಎಲ್ಲ ತತ್ವಜ್ಞಾನಿಗಳಲ್ಲಿ ಯಾವೊಬ್ಬ ತತ್ವಜ್ಞಾನಿಯೂ ರಸೆಲ್‌ರಷ್ಟು ದೀರ್ಘಕಾಲ ಬದುಕಿರಲಿಲ್ಲ.

ಡಾ॥ ಹರ್ಡೀಕರ್

ಭಾರತದ ಸ್ವಾತಂತ್ರ್ಯ ಹೋರಾಟ ಅನೇಕ ಕನ್ನಡಿಗರನ್ನು ದೇಶ ನಿರ್ಮಾಣದ ಕೆಲಸದಲ್ಲಿ ತೊಡಗಿಸಿತು. ಅವರಲ್ಲಿ ಕೆಲವರು ದೊಡ್ಡ ಪಾತ್ರ ವಹಿಸಿದರು. ಇನ್ನು ಕೆಲವರು ತಮ್ಮ ಸಾಮರ್ಥ್ಯಕ್ಕನುಸಾರ ಪಾತ್ರ ವಹಿಸಿದರು. ದೊಡ್ಡ ಹಾಗೂ ಪ್ರಮುಖ ಪಾತ್ರ ವಹಿಸಿದ ಕನ್ನಡಿಗರಲ್ಲಿ ಡಾ; ಎನ್. ಎಸ್. ಹರ್ಡೀಕರ್ ಪ್ರಮುಖರು. ಇವರು ಕರ್ನಾಟಕದ ಸಾಹಿತ್ಯಕ-ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕೇಂದ್ರವಾದ ಧಾರವಾಡದಲ್ಲಿ ಮೇ ೯, ೧೮೮೯ ರಲ್ಲಿ ಹುಟ್ಟಿದರು. ಬಾಲ್ಯದಲ್ಲಿಯೇ ಅಣ್ಣಂದಿರನ್ನೂ, ತಂದೆ-ತಾಯಿಗಳನ್ನೂ, ಕಳೆದುಕೊಂಡ ಹರ್ಡೀಕರ್‌ರಿಗೆ ಸ್ವಾತಂತ್ರ್ಯ ಆಂದೋಲನವೇ ತಾಯಿ ಸಮಾನವಾಯಿತು. ಬಂಧುಗಳಲ್ಲಿ ಕಾಣಬಹುದಾಗಿದ್ದ ವಾತ್ಸಲ್ಯವನ್ನು ಅವರು ಅಂದಿನ ಸ್ವಾತಂತ್ರ್ಯ ಆಂದೋಲನದ ನಾಯಕರಾಗಿದ್ದ ಬಾಲಗಂಗಾಧರ ತಿಲಕ್, ಲಾಲಾಲಜಪತರಾಯ್, ನೆಹರೂ, ಮಹಾತ್ಮ ಗಾಂಧೀಯವರಿಂದ ಪಡೆದರು. ಇಂಥ ನಾಯಕರ ಸೇವೆಯಲ್ಲಿ, ಮಾರ್ಗದರ್ಶನದಲ್ಲಿ ಬೆಳೆದು ಬಂದರು ಹರ್ಡೀಕರ್.

ಸ್ವಾತಂತ್ರ್ಯ ಆಂದೋಲನದಲ್ಲಿ ಅಸಂಖ್ಯಾತ ಯುವಕರು ಸಹ ಧುಮುಕಿದ್ದರು. ಅವರಿಗೆ ಸಂಘಟನಾತ್ಮಕವಾಗಿ ಕೆಲಸ ಮಾಡುವ ರೀತಿ-ನೀತಿಗಳು ಗೊತ್ತಿರಲಿಲ್ಲ. ಒಂದು ಕಡೆ ಹಿರಿಯ ನಾಯಕರ ಪಡೆಯಿತ್ತು; ಇನ್ನೊಂದು ಕಡೆ ಯುವಕರ, ವಿದ್ಯಾರ್ಥಿಗಳ ಪಡೆಯಿತ್ತು. ಈ ಎರಡು ಪ್ರಕಾರದ ಪಡೆಗಳ ಮಧ್ಯದ ಅಂತರವನ್ನು ಕಟ್ಟಬಲ್ಲ ಒಂದು ಧೃಡ ಸೇತುವೆಯ ಅಗತ್ಯವಿತ್ತು. ಅಂಥ ಸೇತುವೆಯನ್ನು ಕಟ್ಟುವ ಕೆಲಸವನ್ನು ಹರ್ಡೀಕರ್ ಮಾಡಿದರು. ಈ ಪ್ರಯತ್ನದಿಂದಾಗಿ ಮುಂದೆ ನಡೆದ ಎಲ್ಲ ಬೃಹತ್ ಕಾಂಗ್ರೆಸ್ ಅಧಿವೇಶನಗಳಲ್ಲಿ ಯುವ ಸ್ವಯಂಸೇವಕರು ಹರ್ಡೀಕರರ ನೇತೃತ್ವದಲ್ಲಿ ಮಿಂಚತೊಡಗಿದರು. ಅಧಿವೇಶನದಲ್ಲಿಯ ಅವ್ಯವಸ್ಥೆ ದೂರವಾಗಿ ವ್ಯವಸ್ಥೆ ಹತ್ತಿರ ಬಂತು. ನಾಯಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ನಾಯಕರಿಗೆ ನಂಬಬಹುದಾದ ಯುವ ಪಡೆ ದೊರೆತರೆ, ಯುವಕರಿಗೆ ದೇಶಾಭಿಮಾನ, ದೇಶಸೇವೆ, ಶಿಸ್ತು ಇತ್ಯಾದಿಗಳಲ್ಲಿ ತರಬೇತಿ ಪಡೆಯುವ ಅವಕಾಶ ದೊರೆಯಿತು. ಇಂಥ ಮಹತ್ವಪೂರ್ಣ ಸಾಧನೆಗೆ ಕಾರಣರಾಗಿದ್ದ ಡಾ: ಹರ್ಡೀಕರ್ ಸ್ವತಃ ಶಿಸ್ತಿನ ಸಿಪಾಯಿಯಾಗಿದ್ದರು. ಸ್ವತಃ ಸ್ವಯಂಸೇವಕರ ಸಮವಸ್ತ್ರವನ್ನು ಧರಿಸುತ್ತಿದ್ದರು. ಎಲ್ಲಾ ಹಿರಿಯ ನಾಯಕರ ಹತ್ತಿರ ಸುಲಭವಾಗಿ ಹೋಗಿ ಮಾತನಾಡಬಲ್ಲ ಸ್ವಾತಂತ್ರ್ಯ ಪಡೆದಿದ್ದ ಏಕೈಕ ವ್ಯಕ್ತಿ ಹರ್ಡೀಕರರಾಗಿದ್ದರು.

ಹರ್ಡೀಕರರು ತಮ್ಮ ಜೀವನದ ೮೯ ವರ್ಷಗಳನ್ನು ದೇಶಸೇವೆಗಾಗಿಯೇ ಉಪಯೊಗಿಸಿದರು. ಇವರ ಸೇವೆಯನ್ನು ಗುರ್ತಿಸಿ ಭಾರತ ಸರ್ಕಾರ ಅವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ಕೊಟ್ಟಿತು. ಇದಕ್ಕೂ ಮೊದಲು ಅವರ ೬೦ ನೇ ಜನ್ಮ ದಿನೋತ್ಸವದ ಸಂದರ್ಭದಲ್ಲಿ ದೇಶದ ಜನತೆ ಸಂಗ್ರಹಿಸಿಕೊಟ್ಟ ೧೧೭ ಸಾವಿರ ರೂಪಾಯಿಗಳನ್ನು ಅವರು ದೇಶ ಸೇವೆಗಾಗಿ ಒಂದು ದತ್ತಿಯನ್ನು ಸ್ಥಾಪಿಸಿ ಆ ಹಣವನ್ನು ಆ ದತ್ತಿಗೆ ಕೊಟ್ಟು ತಮ್ಮ ಪೂರ್ವಾಶ್ರಮದಲ್ಲಿದ್ದಂತೆಯೇ ಬಡತನವನ್ನು ಸ್ವೀಕರಿಸಿದರು.

ಮೇಲ್ಕಾಣಿಸಿದ ಐದು ಮಹಾನುಭಾವರು ಮೇ ಮಾಹೆಯಲ್ಲಿ ಜನಿಸಿದ್ದರಿಂದ ವರ್ಷದ೧೨ ತಿಂಗಳುಗಳ ಗುಚ್ಛದಲ್ಲಿ ಮೇ ಮಾಹೆಯ ಪುಷ್ಪ ವಿಶೇಷವಾಗಿ ಕಂಗೊಳಿಸುತ್ತದೆ.

* * *

ಕತ್ತಲೆಯ ಸೊಗಸನ್ನು ಕಾಣುವತ್ತ.....

-ಶತಾವಧಾನಿ ಡಾ॥. ಆರ್. ಗಣೇಶ್

ಕತ್ತಲೆಂದರೆ ಅದೆಷ್ಟೋ ಮಂದಿಗೆ ಅಂಜಿಕೆ. ಇನ್ನೆಷ್ಟೋ ಜನರಿಗೆ ಅಸಹ್ಯ. ಅದು ಅಜ್ಞಾನ-ತಮಸ್ಸುಗಳ ಪ್ರತೀಕ, ನಿಗೂಢತೆ-ಭಯಾನಕತೆಗಳ ಸಂಕೇತ ಹಾಗೂ ಅಮಂಗಳ-ಅದೈವಿಕಗಳ ಸಾಕಾರವೆಂದು ಪರಂಪರೆಯ ವಿಶ್ವಾಸ. ಎಲ್ಲ ನಾಗರೀಕತೆಗಳೂ ಮತ್ತೆಲ್ಲ ಸಂಸ್ಕೃತಿಗಳೂ ಕತ್ತಲನ್ನು ಹೇವರಿಸಿಕೊಂಡೇ ಕಂಡಿವೆ,ಅನುಮಾನದಿಂದಲೇ ನೋಡಿವೆ. ಎಲ್ಲೆಲ್ಲಿಯೂ ಜ್ಞಾನ-ಸತ್ವ-ಭರವಸೆ-ಜೀವನ-ಸ್ಫೂರ್ತಿ-ವಿಶ್ವಾಸ-ಉಲ್ಲಾಸ-ಪಾವಿತ್ರಗಳಿಗೆ ಬೆಳಕು ಅಥವಾ ಹಗಲು ಪ್ರತಿಮೆಯಾಗಿ ನಿಂತರೆ ಇವುಗಳಿಗೆಲ್ಲ ಪ್ರತಿಯಾಗಿ ಎಂಬಂತೆ ಕತ್ತಲು ಅಥವಾ ಇರುಳು ಸಂದಿದೆ. ದಿಟವೇ, ಮಾನವ ಜೀವನದ ಸಕ್ರಿಯಾಸ್ತಿತ್ವವೇ ಸೂರ್ಯನಿಂದ; ಅಂದರೆ ಹಗಲಿನಿಂದ. ವಿಶೇಷತಃ ಬೆಂಕಿಯ ಆವಿಷ್ಕಾರದ ಮುನ್ನ, ದೀಪದ ರೂಪಣದ ಮುನ್ನ ಇರುಳೆಂದರೆ-ಅದು ಬೆಳ್ದಿಂಗಳಿಲ್ಲದ್ದಿದ್ದಾಗಲಂತೂ-ಕಾರಿರುಳೇ ಸರಿ, ಕಾಳಿಕಾ ಕರಾಳತೆಯೇ ಸರಿ. ವಿದ್ಯುತ್‌ದೀಪನದ ಬಳಿಕ ಕೂಡ ಇರುಳೆಂದರೆ ಅಂಜಿಕೆ ಅಳಿದಿಲ್ಲ, ಕತ್ತಲೆಂದರೆ ಕಸಿವಿಸಿ ಕಳೆದಿಲ್ಲ. ಆದರೆ ಜಾರರಿಗೆ, ಚೋರರರಿಗೆ, ವಾಮಾಚಾರಿಗಳಿಗೆ, ಕಪಟಾಚಾರಿಗಳಿಗೆ ಕತ್ತಲೆಯೇ ಕೈವಲ್ಯ, ನಟ್ಟಿರುಳೇ ಸೌಭಾಗ್ಯ.

ಸದ್ಯಕ್ಕೆ ನಾವು ಈ ಎರಡು ತುದಿಗಳಿಗಿಂತ ಭಿನ್ನವಾಗಿ ಅದೆಂತು ಕತ್ತಲೆಯನ್ನು ಆಸ್ವಾದಿಸಲು ಸಾಧ್ಯವುಂಟೋ ಹಾಗೆ ಮಾಡೋಣ. ಇದು ಶುದ್ಧವಾಗಿ ಪ್ರಯೋಜನಾತೀತ ದೃಷ್ಟಿ. ಇಲ್ಲಿರುವುದು ಅಪ್ಪಟವಾದ ಕಲಾಸೃಷ್ಟಿಯ ರಸಾಸೃಷ್ಟಿ. ಇಂತಲ್ಲದೆ ಶರ್ವರಿಯ (ರಾತ್ರಿಯ) ಸುಷಮೆ (ಚೆಲುವು) ಅನುಭವಕ್ಕೆಟುಕದು.

ವೇದಗಳಲ್ಲಿಯೇ ಇರುಳಿನ ಬಗೆಗೆ ಹಲವಾರು ಸೊಲ್ಲುಗಳಿವೆ- ಋಕ್ಸಂಹಿತೆಯ ರಾತ್ರಿ ಸೂಕ್ತದಲ್ಲಿ ಹೇಗೆ ಪಕ್ಷಿಗಳು ತಮ್ಮ ತಮ್ಮ ಗೂಡುಗಳಲ್ಲಿ ನೆಮ್ಮದಿಯಿಂದ ವಿಶ್ರಮಿಸುವುವೋ ಹಾಗೆಯೇ ನಾವು ಕೂಡ ರಾತ್ರಿಯ ಸೆರಗಿನಲ್ಲಿ ಮಲಗಿ ವಿಶ್ರಾಂತಿಪಡೆಯೋಣ (ಸಾ ನೋ ಅದ್ಯ ಯಸ್ಯಾ ವಯಂ ನಿ ತೇ ಯಾಮನ್ನವಿಕ್ಷ್ಮಹಿ। ವೃಕ್ಷೇ ನ ವಸತಿಂ ವಯಃ॥ ಋ-೧೨೭-೪) ಎಂದೂ ಇರುಳು ನೇಸರಿನ ಮಗಳು ಸೊಗದ ಸೊಂಪಿರುವವಳು; ಸಾವು-ನೋವಿಲ್ಲದವಳು. ಬಾಮ-

ಭುವಿಗಳನ್ನೆಲ್ಲ ಕಪ್ಪಾಗಿ ಅಪ್ಪಿರುವವಳು. ಮರ-ಗಿಡಗಳನ್ನೆಲ್ಲ ಕತ್ತಲಿನಲ್ಲಿ ಒತ್ತೆಯಿರಿಸಿದವಳು (ರಾತ್ರೀ ವ್ಯಖ್ಯಧಾಯತೀ ಪುರುತ್ರಾ ದೇವ್ಯಕ್ಷಭಿಃ। ವಿಶ್ವಾ ಅಧಿಶ್ರಿಯೋಽಧಿತ॥ ಓರ್ವಪ್ರಾ ಅಮರ್ತ್ಯಾ ನಿವತೋ ದೇವ್ಯುದ್ವತಃ। ಜ್ಯೋತಿಷಾ ಬಾಧತೇ ತಮಃ॥ ಸ್ವಸಾರಮುಸ್ಕೃತೋಷ ಸಂದೇವ್ಯಾಯತೀ। ಅಪೇದು ಹಾಸತೇ ತಮಃ॥ (X-೧೨೭-೧,೨,೩) ಮುಂತಾಗಿ ಮನೋಹರ ವಚನಗಳಿವೆ. ಭೀತಿಯಿದ್ದಲ್ಲಿ ಕವಿತೆ ಬಾರದು. ಈ ಸೂಕ್ತದ ಕಡೆಯಮಂತ್ರಗಳಲ್ಲಿ ಅಂಜಿಕೆಯ ಎಳೆಇದ್ದರೂ ಮೊದಮೊದಲ ಸೊಲ್ಲುಗಳಲ್ಲಿ ಪಲ್ಲವಿಸುವ ಲವಲವಿಕೆ ನೆಮ್ಮದಿ ಹಾಗು ಕಲ್ಪನೆಗಳು ದಿಟವಾಗಿ ಆಸ್ವಾದ್ಯ. ಹಗಲೆಂಬುದು ಗದ್ಯವಾದರೆ ಇರುಳು ನಿಶ್ಚಯವಾಗಿ ಪದ್ಯವೇ ಹೌದು. ದಿವಸವು ಸೈನಿಕನ ಕವಾಯತಿನಂತೆ ವ್ಯಾವಹಾರಿಕ, ನಿಯಮ ನಿಷ್ಠುರ. ರಾತ್ರಿಯಾದರೋ ನರ್ತಕಿಯ ಲಾಸ್ಯದಂತೆ ಅಲೌಕಿಕ, ನಿಯತಿಕೃತ ನಿಯಮರಹಿತೆ-ಹ್ಲಾದೈಕಮಯಿ-ಅನನ್ಯ ಪರತಂತ್ರೆ! ಹಗಲಿನ ಹೊಗರಿನಲ್ಲಿ ಬೇಕಾದ್ದು ಬೇಡದ್ದು ಎಲ್ಲದಕ್ಕೂ ಬೆಳಕಿನ ಥಾಳು ಮಿತಿಮೀರಿ ಗಜಿಬಿಜಿ, ಗಲಿಬಲಿ ಹಾಗೂ ಅಸ್ತವ್ಯಸ್ತತೆಗಳ ಅಸೌಚಿತ್ಯ ತಾಂಡವಿಸಿದರೆ ಇರುಳಿನಲ್ಲಿ ಪರಿಮಿತಕಾಂತಿಯ ನಕ್ಷತ್ರನೀರಾಜನವೋ ಶೀತಲಶಾಂತಚ್ಛವಿಯ ಚಂದ್ರನೀಲಾಂಜನವೋ ಅಪ್ಯಾಯನವಾಗುವಂಥ ನೆಳಲುಬೆಳಕುಗಳ ಚೆಲ್ಲಾಟದ ಗಂಧರ್ವಗೋಳವನ್ನು, ಯಕ್ಷಲೋಕವನ್ನು ನಿರ್ಮಿಸಿ ತನ್ಮೂಲಕ ರಸೋಚಿತ ದರ್ಶನವನ್ನು ಗಂಧರ್ವಗೋಳವನ್ನು, ಯಕ್ಷಲೋಕವನ್ನು ನಿರ್ಮಿಸಿ ತನ್ಮೂಲಕ ರಸೋಚಿತ ದರ್ಶನವನ್ನು ನಮಗುಂಟುಮಾಡುತ್ತದೆ. ವಾಸ್ತವ ಬರ್ಬರ ಲೋಕವೆಲ್ಲಾ ಮಲಗಿದಮೇಲಷ್ಟೇ ಆದರ್ಶ ಕೋಮಲವಾದ ಅಲೋಕವು ಎಚ್ಚರಗೊಳ್ಳುವುದಿಲ್ಲವೇ? ಹೀಗಾಗಿ ತಾನೆ ಶ್ರೀ ಕೃಷ್ಣನು 'ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿಸಂಯಮೀ' ಎಂದಿದ್ದು! (ಭಗವದ್ಗೀತೆ ॥- ೬೯).ಅಷ್ಟೇಕೆ,ಸ್ವಯಂ ಶ್ರೀ ಕೃಷ್ಣನೇ ದೇವತೆಗಳ ಇರುಳಾದ ದಕ್ಷಿಣಾಯನ, ಪಿತೃಗಳ ಇರುಳಾದ ಕೃಷ್ಣಪಕ್ಷ ಹಾಗೂ ಋಷಿ-ಮಾನವರಿರುಳಾದ ರಾತ್ರಿಯಹೊತ್ತಿನಲ್ಲಿ ಹುಟ್ಟಿ, ಕಾಳರಾತ್ರಿಯ ಶ್ಯಾಮಲವರ್ಣ ಶರೀರನಾಗಿದ್ದರೂ ಬಣ್ಣ ಬಣ್ಣದ ಬದುಕಿನಿಂದ ಬಗೆಗಣ್ಣಿನ ಬೆಡಗಿನಿಂದ ಜಗತ್ತನ್ನೇ ಬೆಳಗಿದನಲ್ಲವೇ! ಯೇಸುಸ್ವಮಿಯಾಗಲಿ, ಬುದ್ಧ ಭಗವಂತನಾಗಲಿ ಕತ್ತಲೆಯಲ್ಲಿಯೇ ಹುಟ್ಟಿ ಹೆಸರಾದರಷ್ಟೆ! ಅದಂತಿರಲಿ, ರಾತ್ರಿಗಿರುವ ಹೆಸರುಗಳನ್ನೇ ನೋಡೋಣ. ಅವೆಷ್ಟು ಮಧುರವಾಗಿವೆ, ವಿನೂತನವಾಗಿವೆ, ವಿಪುಲವೂ ಆಗಿವೆ! ಶರ್ವರೀ, ನಿಶಾ, ರಾತ್ರಿ, ತ್ರಿಯಾಮಾ, ಕ್ಷಣದಾ, ಕ್ಷಪಾ, ವಿಭಾವರೀ, ತಮಸ್ವಿನೀ, ರಜನೀ, ಯಾಮಿನೀ, ತಮೀ

ತಮಿಸ್ರಾ, ಜ್ಯೌತ್ಸ್ನೀ,ಪಕ್ಷಿಣೀ, ನಿಶೀಥಿನೀ, ಪರ್ವಣೀ, ಪೂರ್ಣಿಮಾ, ಪೌರ್ಣಮಾಸೀ, ಅಮಾ, ದರ್ಶ, ಅಮಾವಾಸ್ಯಾ, ಅನುಮತೀ, ಕುಹೂ, ಸಿನೀವಾಲೀ, ದೋಷಾ ಮುಂತಾದ ಅನೇಕ ಅಂಕಿತಗಳು ಸಂಸ್ಕೃತದಲ್ಲಿವೆ. ಅದೇ ಹಗಲಿಗೆ ದಿನ, ದಿವಸ, ವಾಸರ, ಅಹಸ್ ಮುಂತಾದ ನಾಲ್ಕೈದು ಅರಸಿಕನಾಮಧೇಯಗಳಷ್ಟೇ ಇವೆ. ರಜನಿಯನ್ನು ರಸಮಯಕವಿತೆಯೆಂದು ಒಕ್ಕಣಿಸಿದೆನಲ್ಲವೇ! ಹೌದು, ರಾತ್ರಿಯನ್ನು ಕೇವಲ ಕವಿಗಳು ಮಾತ್ರ ರಮಣೀಯವಾಗಿ ಕಾಣಬಲ್ಲರು. ವಿಶೇಷತಃ ನಮ್ಮ ಭಾರತೀಯ ಕವಿಗಳು ಪ್ರಕೃತಿ ವರ್ಣನೆಯಲ್ಲಿ ಅಸಾಮಾನ್ಯಕೌಶಲ್ಯವನ್ನು ತೋರಿದ್ದಾರೆ. ತತ್ರಾಪಿ ಅಷ್ಟಾದಶ ವರ್ಣನೆಗಳೆಂದು ಸುಪ್ರಸಿದ್ಧವಾಗಿರುವ ಸಂಪ್ರದಾಯದಲ್ಲಿ ಸೂರ್ಯಾಸ್ತ ಹಾಗೂ ಚಂದ್ರೋದಯಗಳ ಮಧ್ಯಾಂತರವಾಗಿ (ತದಂಗವಾಗಿ)ವಿಭಾವರೀ ವರ್ಣನೆಯುಂಟು. ಈ ಎಡೆಯಲ್ಲಿ ನಮ್ಮ ಸಂಸ್ಕೃತಕವಿಗಳೂ ಅವರನ್ನನುಸರಿಸಿದ ಪ್ರಾಕೃತ, ಕನ್ನಡ, ತೆಲುಗು, ತಮಿಳು, ಹಿಂದೀ ಮುಂತಾದ ದೇಶಭಾಷಾ ಕವಿಗಳೂ ಅದ್ಭುತವಾಗಿ ತಮ್ಮ ಪ್ರತಿಭಾ ಪಾಂಡಿತ್ಯಗಳನ್ನು ಯಾಮಿನೀ ವರ್ಣನೆಗೆ ವಿನಿಯೋಗಿಸಿದ್ದಾರೆ.

(ಸಾಭಾರ : ವಿಜಯ ಕರ್ನಾಟಕ)

***

ನಿಮ್ಮ ತಪ್ಪುಗಳನ್ನು ಬಹಿರಂಗವಾಗಿ ಒಪ್ಪಿಕೊಳ್ಳಿರಿ; ನಿಮ್ಮ ಜೊತೆಯವರೂ ಹಾಗೇಯೇ ಮಾಡುವಂತೆ ಪ್ರೋತ್ಸಾಹಿಸಿ. ಕೋಪಿಸಿಕೊಳ್ಳಬೇಡಿ ಮಕ್ಕಳು ಬೀಳುತ್ತಲೆ ನಡೆಯುವುದನ್ನು ಕಲಿಯುತ್ತವೆ. ಮಗು ಬಿದ್ದಾಗಲೆಲ್ಲಾ ನೀವು ಹೊಡೆದರೆ ಅದು ನಡೆಯುವುದನ್ನು ಕಲಿಯುವುದೇ ಇಲ್ಲ.

-ರಾಬರ್ಟ ಟೌನ್ಸಸೆಂಡ್

ಕೋಳಿಮಾಂಸ ಪ್ರಿಯರಿಗೆ ಒಂದು ಕರೆ

-ಮೇನಕಾ ಗಾಂಧೀ

ಮೂರು ತಿಂಗಳ ಹಿಂದೆ ನನ್ನ ಸಹೋದರಿ ಕೋಳಿಯೊಂದನ್ನು ಮನೆಗೆ ತಂದರು. ಅದು ಸಧ್ಯದಲ್ಲೇ ಕಟುಕನ ಕತ್ತಿಗೆ ತಲೆ ಕೊಡುವುದರಲ್ಲಿತ್ತು. ಅದನ್ನು ರಕ್ಷಿಸಿ ಮನೆಗೆ ತಂದಾಗ ಅದಕ್ಕೆ "ಲೋರ್ನಾ" ಎಂದು ಹೆಸರಿಟ್ಟೆವು. ಲೋರ್ನಾ ನಮ್ಮ ಮನೆಯ ಇತರ ಮೂರು ನಾಯಿಗಳ ಜತೆ ವಾಸಿಸುತ್ತಿದ್ದಾಳೆ. ಅಷ್ಟೇ ಅಲ್ಲ, ಮನೆಗೆ ಬಂದ ಕೆಲವೇ ದಿನಗಳಲ್ಲಿ ನಾಯಿಗಳ ಜತೆ ಸ್ನೇಹದ ಬೆಸುಗೆಯನ್ನೂ ಹಾಕಿದ್ದಾಳೆ. ನಾವು ಲೋರ್ನಾ ಎಂದು ಕರೆದರೆ ಕೂಡಲೇ ಪ್ರತಿಕ್ರಿಯಿಸುತ್ತಾಳೆ. ಅಲ್ಲದೆ ನಿರ್ದೇಶನಗಳನ್ನೂ ಚಾಚೂತಪ್ಪದೆ ಪಾಲಿಸುತ್ತಾಳೆ. ಮುದ್ದು ಮುದ್ದಾಗಿರುವ ಲೋರ್ನಾ ನಮ್ಮ ಮನೆಯ ಇತರ ಪ್ರಾಣಿಗಳೊಂದಿಗೆ ಬೆರೆತುಕೊಂಡಿದ್ದಾಳೆ. ಒಂದು ವೇಳೆ ಆಕೆಯನ್ನು ಆ ಕಟುಕ ಕೊಂದಿದ್ದರೆ ಕತ್ತಿಗೆ ತಲೆ ಕೊಡುವ ಕೋಳಿಗಳ ಪಟ್ಟಿಗೆ ಮತ್ತೊಂದಾಗಿ ಸೇರುತ್ತಿದ್ದಳು. ಆಗ ಆಕೆಯಲ್ಲಿದ್ದ ಕ್ರಿಯಾಶೀಲತೆ ಮತ್ತು ಸ್ನೇಹ ಭಾವನೆ ಇತರರಿಗೆ ಅರಿವಾಗುತ್ತಲೇ ಇರಲಿಲ್ಲ. ಆಕೆ ಒಬ್ಬ ಒಳ್ಳೆಯ ಸಂಗಾತಿ ಕೂಡ ಹೌದು. ಬ್ರಾಯ್ಲರ್ ಕೋಳಿಗಳನ್ನು ಬೆಳೆಸಿ ಕೊನೆಗೆ ಮಾಂಸಕ್ಕಾಗಿ ಕೊಲ್ಲಲಾಗುತ್ತದೆ. ೨೦೦೦ನೇ ವರ್ಷದಲ್ಲಿ ಜಗತ್ತಿನಾದ್ಯಂತ ಬೆಳೆಸಲಾದ ಬ್ರಾಯ್ಲರ್ ಕೋಳಿಗಳ ಸಂಖ್ಯೆ ೨೦ ಶತಕೋಟಿ, ಇವುಳಲ್ಲಿ ಶೇ. ೩೫ರಷ್ಟನ್ನು ಅಮೆರಿಕದಲ್ಲಿ ಉತ್ಪಾನೆಯಾಗಿ ಈ ಎಲ್ಲ ಕೋಳಿಗಳನ್ನೂ ಕೆಂಟುಕಿ ಫ್ರೈಡ್ ಚಿಕನ್ ಕೇಂದ್ರಗಳಿಗೆ ಪೂರೈಸಲಾಗುತ್ತದೆ. ಐರೊಪ್ಯ ಒಕ್ಕೂಟ ಶೇ. ೧೪ರಷ್ಟು ಹಾಗು ಚೀನಾ ಶೇ. ೧೯ರಷ್ಟು ಬ್ರಾಯ್ಲರ್ ಕೋಳಿಗಳನ್ನು ಉತ್ಪಾದನೆ ಮಾಡುತ್ತದೆ. ಭಾರತ ಕೂಡ ಬ್ರಾಯ್ಲರ್ ಕೋಳಿ ಸಾಕಾಣೆ ಕೇಂದ್ರಗಳನ್ನು ಹೆಚ್ಚಿಸುತ್ತಿರುವುದಲ್ಲದೆ, ಪುಣೆಯ ವೆಂಕಟೇಶ್ವರ ಕಸಾಯಿಖಾನೆ ಕೆಂಟುಕಿ ಫ್ರೈಡ್ ಚಿಕನ್ ಕೇಂದ್ರಗಳಿಗೆ ಮಾಂಸ ಪೂರೈಕೆ ಮಾಡುತ್ತಿದೆ. ಅಲ್ಲದೇ ಲಕ್ಷಾಂತರ ಕೋಳಿಗಳನ್ನು ವಿದೇಶಗಳಿಗೆ ರಫ್ತು ಮಾಡುತ್ತಿದೆ. ಆದರೆ ವೆಂಕಟೇಶ್ವರ ಕಸಾಯಿ ಖಾನೆಯೊಳಗೆ ತೆಗೆಯಲಾದ ಗೌಪ್ಯ ವಿಡಿಯೋ ಚಿತ್ರಣವನ್ನು ಗಮನಿಸಿದಾಗ, ಕೋಳಿಗಳನ್ನು ಕ್ರೂರವಾಗಿ ನಡೆಸಿಕೊಳ್ಳುತ್ತಿರುವುದು ಮತ್ತು ಪೈಶಾಚಿಕ ಮಾರ್ಗದ ಮೂಲಕ ಕೊಲ್ಲುತ್ತಿರುವುದು ಗಮನಕ್ಕೆ ಬರುತ್ತದೆ.

ಉತ್ಪಾದನೆ ಹೆಚ್ಚಾದಂತೆ ಕೋಳಿಗಳಮಾಂಸ ಸಂಸ್ಕರಣೆಮಾಡುವಾಗ, ಸಭ್ಯ ರೀತಿಯಲ್ಲಿ ಕೋಳಿಗಳನ್ನು ಕೊಲ್ಲುವ ವಿಧಾನ ಕೂಡ ಮರೆಯಾಗುತ್ತಿದೆ. ಆರರಿಂದ ಎಂಟು ತಿಂಗಳವರೆಗೂ ಈ ಕೋಳಿಗಳು ಬದುಕುತ್ತವೆ. ಆದರೆ ಇಂಹ ತಾತ್ಕಾಲಿಕ ಅವಧಿಯನ್ನೂ ಕೂಡ ಆ ಕೋಳಿಗಳು ಕಿಟಕಿರಹಿತ ಮತ್ತು ಕಿಕ್ಕಿರಿದ ಕೋಣೆಗಳಲ್ಲಿ ಕಳೆಯಬೇಕಾಗುತ್ತದೆ. ಆದರೆ ಕೋಳಿಗಳ ಈ ನರಕಯಾತನೆಯನ್ನು ನಿಯಂತ್ರಿಸುವ ನಿಯಮಗಳೇ ನಮ್ಮಲ್ಲಿಲ್ಲ. ಕೋಣೆಗಳ ನೆಲದ ಮೇಲೆ ಹುಲ್ಲು ಮತ್ತು ಮರದ ಹುಡಿಯನ್ನು ಹರಡಿರುತ್ತಾರೆ. ಆ ನೆಲದ ಮೇಲೆಯೇ ಕೋಳಿಗಳು ಮಲ-ಮೂತ್ರ ವಿಸರ್ಜನೆ ಮಾಡುತ್ತವೆ. ಆದರೆ ನೆಲವನ್ನು ಎಂದಿಗೂ ಸ್ವಚ್ಛಗೊಳಿಸುವುದಿಲ್ಲ. ಬದಲಿಗೆ ಆ ನೆಲದ ಮೇಲೆಯೇ ಕುಡಿಯಲು ನೀರು ಮತ್ತು ಆಹಾರವನ್ನು ಪೂರೈಸಲಾಗುತ್ತದೆ. ಕೆಲವೊಮ್ಮೆ ಒಂದು ಚದರ ಮೀಟರ್ ಚೌಕದಲ್ಲಿ ಇಪ್ಪತ್ತೈದು ಕೊಳಿಗಳನ್ನು ತುರುಕಿರುತ್ತಾರೆ. ಜತೆಗೆ ಗಾಳಿಯೆ ಇಲ್ಲದ ಈ ಕೋಣೆಗಳಲ್ಲಿ ಅಮೋನಿಯ ತುಂಬಿರುತ್ತದೆ. ಸಾಮಾನ್ಯ ಕೋಳಿಗಳು ಫಲಿತಗೊಳ್ಳಲು ಕನಿಷ್ಟಪಕ್ಷ ಆರು ತಿಂಗಳು ಬೇಕಾಗುತ್ತದೆ. ಆದರೆ ಬ್ರಾಯ್ಲರ್ ಕೊಳಿಗಳು ಕೊಲ್ಲಲು ಅಗತ್ಯವಿರುವ ತೂಕವನ್ನು ಕೇವಲ ನಲವತ್ತು ದಿನದೊಳಗೆ ಗಳಿಸಿಕೊಳ್ಳುತ್ತವೆ.

ದೊಡ್ಡ ಗಾತ್ರದ ಹಾಗು ವೇಗವಾಗಿ ಬೆಳೆಯುವ ಕೋಳಿಗಳನ್ನು ಹೆಚ್ಚಾಗಿ ಬೆಳೆಸಲಾಗುತ್ತದೆ.ಆದರೆ ವೇಗವಾಗಿ ಬೆಳೆಯುವ ಈ ಕೋಳಿಗಳ ರೋಗನಿರೋಧಕ ಶಕ್ತಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ಹೀಗಾಗಿ ಕೋಳಿ ಮರಣ ಪ್ರಮಾಣ ವಾರಕ್ಕೆ ೧ರಷ್ಟು ವೇಗವಾಗಿದೆ. ಮೊಟ್ಟೆಯಿಡುವ ಕೋಳಿಗಳ ಮರಣ ಪ್ರಮಾಣಕ್ಕೆ, ಇದು ಏಳು ಪಟ್ಟು ಹೆಚ್ಚಾಗಿದೆ. ಏಕೆಂದರೆ ಬ್ರಾಯ್ಲರ್ ಕೋಳಿಗಳು ವೇಗವಾಗಿ ಬೆಳೆಯುವುದರಿಂದ ಅವುಗಳ ಮೂಳೆ ರಚನೆಯಲ್ಲಿ ದೋಷವುಂಟಾಗಿದ್ದು, ಅತ್ಯಂತ ತ್ವರಿತವಾಗಿ ಮೂಳೆ ಕಾಯಿಲೆಗೆ ಗುರಿಯಾಗುತ್ತವೆ. ಹೀಗೆ ಬ್ರಾಯ್ಲರ್ ಕೋಳಿಗಳಿಗೆ ನಡೆಯುವುದರ ಜೊತೆಗೆ ನಿಂತಲ್ಲೇ ನಿಲ್ಲುವುದೂ ಕೂಡ ಕಷ್ಟವಾಗುತ್ತದೆ. ಇಂತಹ ಊನಗೊಂಡ ಕೋಳಿಗಳೂ ತಮ್ಮ ಜೀವಿತಾವಧಿಯ ಶೇ. ೮೬ ರಷ್ಟು ಕಾಲವನ್ನು ಮಲಗಿಕೊಂಡೇ ಕಳೆಯುತ್ತವೆ. ಏಕೆಂದರೆ ಅವುಗಳು ಕಾಲುಗಳ ತೀವ್ರ ನೋವಿನಿಂದ ಬಳಲುತ್ತಿರುತ್ತವೆ. ಕಾಲುಗಳು ಹೊರ ಅಥವಾ ಒಳಮುಖವಾಗಿ ತಿರುಚಿಕೊಂಡಿರುತ್ತವೆ. ಬಹಳಷ್ಟು ಕೋಳಿಗಳು ರೋಗಾಣುಗಳು ಪೀಡಿತವಾಗಿರುತ್ತವೆ. ಈ ರೋಗಾಣುಗಳು ಕಾಲು ಮೂಳೆಗಳ ಮೇಲ್ಭಾಗವನ್ನು ಸಂಪೂರ್ಣವಾಗಿ ಹಾಳುಗೆಡವಿರುತ್ತವೆ. ಕೆಲವು ಕೋಳಿಗಳ ಕಾಲುಗಳು ಊದಿಕೊಂಡಿದ್ದರೆ, ಇನ್ನು ಕೆಲವು ಕೊಳಿಗಳ ಕಾಲುಗಳು

ಕೀಲುನೋವು ಅಥವಾ ಮೂಳೆ ಮುರಿತಕ್ಕೆ ಒಳಗಾಗಿರುತ್ತವೆ. ಕುಡಿಯುವ ನೀರಿನ ತೊಟ್ಟಿಗಳ ಸಮೀಪ ಸಾಗುವುದು ಅವುಗಳಿಗೆ ಕಷ್ಟವಾಗುತ್ತದೆ, ಹಲವಾರು ದಿನಗಳ ಕಾಲ ನೀರಿಲ್ಲದೆ ಜೀವಿಸುತ್ತವೆ. ಎದೆ ವಿಸ್ತಾರಗೊಳ್ಳುವುದರಿಂದ ಸ್ತಿಮಿತತೆ ತಪ್ಪಿ ನೆಲಕ್ಕೆ ಒರಗಿಕೊಳ್ಳಲಾರಂಭಿಸುತ್ತವೆ. ಇದು ನಡೆಯಲು ಅಡ್ಡಪಡಿಸುವುದಲ್ಲದೆ ಕಾಲು ಹಾಗು ಸೊಂಟದ ಮೇಲೆ ಅಧಿಕ ಒತ್ತಡ ಬೀಳಲು ದಾರಿ ಮಾಡಿಕೊಂಡಿರುತ್ತವೆ. ತೀವ್ರ ಹೃದಯದ ತೊಂದರೆ ಶೇ ೩ ರಷ್ಟು ಬ್ರಾಯ್ಲರ್ ಕೋಳಿಗಳನ್ನು ಕೊಲ್ಲುತ್ತದೆ. ಐರೋಪ್ಯ ಒಕ್ಕೂಟದಲ್ಲಿ ಒಂದು ವರ್ಷಕ್ಕೆ ಸುಮಾರು ೮೮ ದಶಲಕ್ಷ ಬ್ರಾಯ್ಲರ್ ಕೋಳಿಗಳು ಹೃದಯದ ತೊಂದರೆಯಿಂದ ಸಾಯುತ್ತವೆ. ತೀವ್ರ ದಟ್ಟಣೆಯಿಂದಾಗಿ ಬ್ರಾಯ್ಲರ್ ಕೋಳಿಗಳ ವರ್ತನೆಯಲ್ಲಿ ದೋಷ ಕಂಡುಬರುವುದಲ್ಲದೆ, ಆರೋಗ್ಯದ ಸಮಸ್ಯೆಗಳೂ ಕಾಣಿಸಿಕೊಳ್ಳುತ್ತವೆ, ಇದು ಊನ, ಎದೆ ಉಬ್ಬಿಕೊಳ್ಳುವುದು, ಪಾದಗಳು ಬಿರುಕು ಬಿಟ್ಟುಕೊಳ್ಳುವುದು ಮುಂತಾದ ಸಮಸ್ಯೆಗಳಿಗೆ ಆಹ್ವಾನ ನೀಡುತ್ತದೆ. ಐವತ್ತು ಕೋಳಿ ಕೇಂದ್ರಗಳ ಸಮೀಕ್ಷೆ ನಡೆಸಿದಾಗ ಶೇ ೨೦ ರಷ್ಟು ಕೋಳಿಗಳ ಕಾಲುಗಳು ಬಿರುಕು ಬಿಟ್ಟಿಕೊಂಡಿರುವುದು ಬೆಳಕಿಗೆ ಬಂದಿದೆ. ತೀವ್ರ ದಟ್ಟಣೆ ಮತ್ತು ಮಲ ಮೂತ್ರಗಳನ್ನು ನಿಂತಲ್ಲೆ ವಿಸರ್ಜಿಸುವುದರಿಂದಾಗಿ ಕೊರಡಿಗಳು ಒದ್ದೆಯಾಗುತ್ತವೆ. ಅಲ್ಲದೆ ವಾಯುಮಾಲಿನ್ಯ ಅಧಿಕಗೊಂಡು ಉಷ್ಣತೆಯು ಪ್ರಮಾಣದಲ್ಲಿ ಏರಿಳಿತವುಂಟಾಗುತ್ತದೆ. ಸಾಮಾನ್ಯ ಕೋಳಿಗಳು ದಿನವಿಡೀ ನಡೆದು ತಮ್ಮ ಆಹಾರವನ್ನು ಹೆಕ್ಕಿ ತಿನ್ನುತ್ತವೆ. ಆದರೆ ಬ್ರಾಯ್ಲರ್ ಕೋಳಿಗಳಿಗೆ ಒಂದು ಅಂಗುಲ ಚಲಿಸಲೂ ಜಾಗವಿರುವುದಿಲ್ಲ. ಕೆಲವೊಮ್ಮೆ ಕಾಲುಗಳ ನೋವಿನಿಂದಾಗಿ ನೆಲಕ್ಕುರುಳಿರುವ ಜೊತೆಕೋಳಿಗಳ ಮೇಲೆಯೇ ಚಲಿಸುತ್ತವೆ. ಹೀಗೆ ಕಣ್ಣ ಮುಂದೆಯೇ ಕೋಳಿಗಳು ಸಾಯುತ್ತವೆ. ಆ ಸತ್ತ ಕೋಳಿಗಳ ಬ್ಯಾಕ್ಟೀರಿಯಾಗಳು ಇತರ ಕೋಳಿಗಳಿಗೂ ಹರಡುತ್ತವೆ. ಈ ರೀತಿ ಎಲ್ಲಕೋಳಿಗಳು ಸೋಂಕು ರೋಗಕ್ಕೆ ಒಳಗಾಗುತ್ತವೆ, ಗಾಳಿಯ ಕೊರತೆ ಮತ್ತು ದಟ್ಟವಾದ ಧೂಳಿನಿಂದಾಗಿ ಉಸಿರಾಟದ ತೊಂದರೆ ಕೂಡಾ ಕಾಣಿಸಿಕೊಳ್ಳುತ್ತದೆ, ಇಷ್ಟಾಗಿಯೂ ಬ್ರಾಯ್ಲರ್ ಕೋಳಿ ಸಾಕಣೆ ಕ್ಷೇತ್ರ ಈ ಲೋಪಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಕೋಳಿಗಳು ನರಕದಲ್ಲಿ ಜೀವಿಸಿದರೂ, ಅವುಗಳರೋಗ ಗ್ರಾಹಕರಿಗೆ ವರ್ಗಾವಣೆಯಾದರೂ ಮಾಲಿಕರಿಗೆ ಚಿಂತೆಯಿಲ್ಲ. ಅವರಿಗೆ ಕೋಳಿಗಳ ತೂಕವೇಗವಾಗಿ ಹೆಚ್ಚಾದರೆ ಸಾಕು. ಕೋಳಿಗಳ ಸ್ಥಾನದಲ್ಲಿ ನೀವು ನಿಂತು ನೋಡಿ. ಕೋಳಿಗಳ ಮೇಲೆ ಆಗುತ್ತಿರುವ ದೌರ್ಜನ್ಯ ಸರಿಯೇ? ಒಂದು ವೇಳೆ ನೀವು ಕೋಳಿಯಾಗಿ ಮರುಜನ್ಮವೆತ್ತಬೇಕಾಗಿ ಬಂದರೆ, ಇಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂಬುದು ನೆನಪಿರಲಿ. ಆದ್ದರಿಂದ ಕೋಳಿಮಾಂಸ ಖರೀದಿಯನ್ನು ನಿಲ್ಲಿಸಿ, ಕೋಳಿಮಾಂಸದ ರಫ್ತನ್ನು ವಿರೋಧಿಸಿ ಪ್ರತಿಭಟನೆಗೆ ಮುಂದಾಗಿ.

(ಸಾಭಾರ : ವಿಜಯ ಕರ್ನಾಟಕ)

***

ಸಂವೇದನೆ ಕಳೆದುಕೊಂಡ ಸಮಾಜ ಮತ್ತು ಕಣ್ಮರೆಯಾದ ವಿದ್ಯಾರ್ಥಿ ಶಕ್ತಿ

–ಚಂದನ್ ಮಿತ್ರ

ಇಪ್ಪತ್ತು ವರ್ಷಗಳ ಹಿಂದಿದ್ದ ಸನ್ನಿವೇಶಕ್ಕೆ ಹೋಲಿಸಿದರೆ, ಈಗ ದಿಲ್ಲಿ ಜನರು ಮಹಿಳೆಯರ ವಿರುದ್ಧದ ದೌರ್ಜನ್ಯದ ಬಗ್ಗೆ ಸಂವೇದನಾ ಶೀಲತೆಯನ್ನು ಕಳೆದುಕೊಂಡಿದ್ದಾರೆಯೆ? ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಉಂಟಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಮೊದಲಿಗಿಂತಲೂ ಈಗ ಮಹಿಳೆಯರು ಮುಕ್ತವಾಗಿ ವಿಹರಿಸುತ್ತಾರೆ ಮಧ್ಯರಾತ್ರಿಯಲ್ಲೂ ಯಾವುದೇ ಅಳುಕಿಲ್ಲದೇ ಬಾರ್‌ಗಳನ್ನು ಪ್ರವೇಶಿಸಿ ಮದ್ಯ ಸೇವಿಸುತ್ತಾರೆ. ಕತ್ತಲಾದ ಮೇಲೂ ಮಲ್ಟಿಪ್ಲೆಕ್ಸಗಳ ಬಳಿ ಓಡಾಡುತ್ತಿರುತ್ತಾರೆ. ಇಂತಹ ಮಹಿಳೆಯರು ಮೇಲ್ವರ್ಗಕ್ಕೆ ಸೇರಿದ್ದಾರೆಂದರ್ಥವಲ್ಲ. ಎಲ್ಲರೂ ಮುಕ್ತವಾಗಿ ಓಡಾಡುತ್ತಾರೆ. ಹೀಗೆ ಬಾಹ್ಯ ನೋಟಕ್ಕೆ ದಿಲ್ಲಿ ಅತ್ಯಂತ ನಾಗರಿಕ ನಗರವಾಗಿದೆ. ಎಪ್ಪತ್ತರ ದಶಕದಲ್ಲಿ ನಾವೆಲ್ಲ ವಿದ್ಯಾರ್ಥಿಗಳಾಗಿದ್ದಾಗ ಇದ್ದ ಸನ್ನಿವೇಶಕ್ಕೆ ಹೋಲಿಸಿದರೆ ಬೀದಿಯಲ್ಲಿ ನಡೆಯುವಾಗ ಮಹಿಳೆಯರು ಅಳುಕಬೇಕಾಗಿದ್ದಂತಹ ಪರಿಸ್ಥಿತಿ ಈಗಿಲ್ಲ.

ಇದು ಖಂಡಿತ ಸಿಹಿ ಸುದ್ದಿ, ಆದರೆ ಕೆಲವು ಕೆಟ್ಟ ಸುದ್ದಿಗಳೂ ಇವೆ. ಅತ್ಯಾಚಾರ ಅಥವಾ ಲೈಂಗಿಕಹಲ್ಲೆಯಂತಹ ಮಹಿಳೆಯರ ಮಾನಹರಣ ಘಟನೆಗಳ ಬಗ್ಗೆ ದಿಲ್ಲಿ ನಾಗರಿಕರು ಉದಾಸೀನ ಪ್ರವೃತ್ತಿ ತೋರುತ್ತಿದ್ದಾರೆ, ಈ ವರ್ಷ ನಡೆದ ಕೆಲವು ಘಟನೆಗಳು ದಿಗ್ಭ್ರಮೆ ಹುಟ್ಟಿಸುವಂತಿದೆ. ಖೂನಿ ದರ್ವಾಜಾದಲ್ಲಿ ಎಂ.ಎ.ಎಂ.ಸಿ. ಕಾಲೇಜಿನ ವಿದ್ಯಾರ್ಥಿನಿಯ ಮೇಲೆ ನಡೆದ ಅತ್ಯಾಚಾರ, ಖಾಸಾಗಿ ನರ್ಸಿಂಗ್ ಹೋಂನಲ್ಲಿ ನರ್ಸ್ ಒಬ್ಬರ ಮೇಲೆ ಕ್ರೂರ ಅತ್ಯಾಚಾರಗಳಷ್ಟೇ ಅಲ್ಲ, ಕಳೆದ ಹದಿನೈದು ದಿನಗಳಲ್ಲಿ ನಡೆದ ಇನ್ನೆರಡು ಘಟನೆಗಳು ಅಪರಾಧಿಗಳಲ್ಲಿ ಭೀತಿ ಭಾವನೆ ಇಲ್ಲದಿರುವುದನ್ನು ಸೂಚಿಸುತ್ತವೆ. ಆಶ್ಚರ್ಯಕರ ವಿಷಯವೆಂದರೆ ಬುದ್ಧ ಜಯಂತಿ ಪಾರ್ಕ್‌ನಲ್ಲಿ ಅತ್ಯಾಚಾರವೆಸಗಿದವರು ಭಾರತೀಯ ಸೇನಾಪಡೆಯ ಅತ್ಯುನ್ನತ ವರ್ಗಕ್ಕೆ ಸೇರಿದ ರಾಷ್ಟ್ರಪತಿಯವರ ಭದ್ರತಾ ಅಧಿಕಾರಿಗಳಾಗಿದ್ದಾರೆ. ಈ ಅತ್ಯಾಚಾರಿಗಳು ಎಂತಹ ಉದಾಸೀನ ಪ್ರವೃತ್ತಿ ಹೊಂದಿದ್ದರೆಂದರೆ, ಅತ್ಯಾಚಾರವೆಸಗಿದ ಒಬ್ಬ ವ್ಯಕ್ತಿ ಅತ್ಯಾಚಾರ ನಡೆದ ಸ್ಥಳದಲ್ಲೇ ನಿದ್ರಿಸುವಂತಹ

ಧೈರ್ಯ ತೋರಿದ್ದಾನೆ. ಅತ್ಯಾಚಾರಕ್ಕೊಳಗಾದ ಯುವತಿ ಮತ್ತು ಆಕೆಯ ಪ್ರಿಯತಮ ಪೋಲೀಸಿಗೆ ದೂರು ಕೊಡುವ ಧೈರ್ಯ ತೋರುವುದಿಲ್ಲವೆಂದೇ ಭಾವಿಸಿದ್ದರು. ಇದಾದ ಕೆಲವೇ ದಿನಗಳಲ್ಲಿ ಸ್ವಿಸ್ ರಾಯಭಾರ ಕಚೇರಿಯ ಮಹಿಳಾ ಅಧಿಕಾರಿಯೊಬ್ಬರ ಮೇಲೆ ಅತ್ಯಾಚಾರ ನಡೆದಿದೆ. ವಿದೇಶಿ ಮಹಿಳೆಯೊಬ್ಬಳು ತನ್ನ ಮೇಲೆ ನಡೆದ ದೌರ್ಜನ್ಯದ ಬಗ್ಗೆ ದೂರು ನೀಡುವುದಿಲ್ಲ ಎಂದು ಅಪಾರಾಧಿಗಳು ಹೇಗೆ ತಾನೇ ಭಾವಿಸಿದರು? ಅಥವಾ ಒಂದು ವೇಳೆ ದೂರು ನೀಡಿದರೂ ಕಾನೂನಿನ ಶಿಕ್ಷೆಯಿಂದ ತಪ್ಪಿಸಿಕೊಳ್ಳ ಬಹುದು ಎಂದು ಎಣಿಸಿದರೇ? ಈ ಪ್ರಕರಣದ ಬಗ್ಗೆ ಗಮನಹರಿಸಿದರೆ ಆಘಾತ ಉಂಟಾಗುತ್ತದೆ. ಸ್ವಿಸ್ ಮಹಿಳೆ ಮೇಲೆ ಅತ್ಯಚಾರವೆಸಗಿದವರ ಮುಖ್ಯ ಉದ್ದೇಶ ದರೋಡೆಯಾಗಿತ್ತು. ಆದರೆ ದರೋಡೆ ಮಾಡಿದವರಲ್ಲಿ ಒಬ್ಬ ವ್ಯಕ್ತಿ ಕಾರು ಚಲಿಸುತ್ತಿರುವಾಗಲೇ ಅತ್ಯಾಚಾರವೆಸಗಲು ನಿರ್ಧರಿಸಿದ್ದನ್ನು ನೋಡಿದಾಗ ಅದರಿಂದುಂಟಾಗುವ ಅಪಾಯದ ಅರಿವಿದ್ದಾಗ್ಯೂ ಅಂತಹ ಕಾರ್ಯವೆಸಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ದರೋಡೆ ಪ್ರಕರಣಗಳನ್ನು ಮಾಧ್ಯಮಗಳಾಗಲಿ ಅಥವಾ ಪೋಲೀಸರಾಗಲಿ ಗಂಭೀರವಾಗಿ ತೆಗೆದುಕೊಳ್ಳುವ ಸಾಧ್ಯತೆ ಕಡಿಮೆ ಇರಬಹುದು.ಆದರೆ ಅತ್ಯಾಚಾರ ಬೇರೆಯೇ ವಿಷಯ. ಆದರೂ ಇಂತಹ ಹೀನ ಕೃತ್ಯ ವೆಸಗುವಾಗಲೂ ತಾವೇನು ಮಾಡುತ್ತಿದ್ದೇವೆ ಎಂಬುದನ್ನು ಅರಿಯದಷ್ಟು ಅವರು ಮಾದಕದ್ರವ್ಯದ ಪ್ರಭಾವಕ್ಕೊಳಗಾಗಿದ್ದರೆ? ಹೆಚ್ಚುತ್ತಿರುವ ಡ್ರಗ್ ಸಂಸ್ಕೃತಿ ಅತ್ಯಾಚಾರದಂತಹ ಹೀನ ಕೃತ್ಯಕ್ಕೆ ಆಹ್ವಾನ ನೀಡುತ್ತಿದೆಯೆ?

ಇದು ನಾಗರಿಕ ಸಮಾಜಕ್ಕೆ ಅವಮಾನಕಾರಿ ಘಟನೆ. ಈ ಘಟನೆ ನಡೆದಾಗ ೧೯೭೮ರಲ್ಲಿ ಸಂಭವಿಸಿದ್ದ ಪ್ರಕರಣವೊಂದರ ನೆನಪಾಯಿತು. ಭಿಲ್ಲಾ ಮತ್ತು ರಂಗಾ ಎಂಬ ಇಬ್ಬರು ಕ್ರಿಮಿನಲ್‌ಗಳು ಸೇನಾ ಅಧಿಕಾರಿಯೊಬ್ಬರ ಮಗಳಾದ ಗೀತಾ ಚೊಪ್ರಾ ಮೇಲೆ ಅತ್ಯಾಚಾರವೆಸಗಿ ಆಕೆಯ ಸೋದರ ಸಂಜಯ್‌ನೆದುರೇ ಕೊಲೆಗೈದಿದ್ದರು. ಕೊನೆಗೆ ಸಂಜಯ್‌ನನ್ನೂ ಬಲಿ ತೆಗೆದುಕೊಂಡಿದ್ದರು. ಈ ಘಟನೆ ಸಂಭವಿಸಿದಾಗ ದಿಲ್ಲಿ ವಿದ್ಯಾರ್ಥಿಗಳು ತೀವ್ರ ಪ್ರತಿಭಟನೆ ಸಲ್ಲಿಸುವ ಮೂಲಕ ಅಪರಾಧಿಗಳಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದ್ದರು. ಆಗ ಅಧಿಕಾರದಲ್ಲಿದ್ದ ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಸರಕಾರ ತೀವ್ರ ಇಕ್ಕಟ್ಟಿಗೆ ಸಿಲುಕಿತ್ತು. ಇಡೀ ದಿಲ್ಲಿಗೆ ದಿಲ್ಲಿಯೇ ಕೋಪೋದ್ರಿಕ್ತಗೊಂಡಿತ್ತು. ಬೀದಿಗಿಳಿದಿದ್ದ ಜನ ಪ್ರತಿಭಟನೆ, ಧರಣಿ ಮತ್ತು ಮುಷ್ಕರಕ್ಕೆ ಮುಂದಾಗಿದ್ದರು. ಇದಾದ ಕೆಲವು ವರ್ಷಗಳ ನಂತರ ಭಿಲ್ಲಾ ಮತ್ತು ರಂಗನನ್ನು ತಿಹಾರ ಜೈಲಿನಲ್ಲಿ ನೇಣುಗಂಬಕ್ಕೇರಿಸಲಾಯಿತು.ಗಲ್ಲಿಗೇರಿಸಿದಾಗ ಇಡೀ ದಿಲ್ಲಿಯೇ ಸಂಭ್ರಮ

ಆಚರಿಸಿತ್ತು. ಹೀಗೆ ಸಂಜಯ್–ಗೀತಾ ಚೋಪ್ರಾ ಪ್ರಕರಣ ದೆಹ್ಲಿಯ ಜನರ ಆತ್ಮಪ್ರಜ್ಞೆಯನ್ನೇ ಬಡಿದೆಬ್ಬಿಸಿತ್ತು. ಅಧಿಕಾರಿ ವರ್ಗಕ್ಕೆ ಛಾಟಿಯೇಟು ನೀಡಿತ್ತು.

ಆದರೆ ಕಳೆದ ಒಂದು ತಿಂಗಳಲ್ಲಿ ಅತ್ಯಾಚಾರದಂತಹ ನಾಲ್ಕು ಕ್ರೂರ ಘಟನೆಗಳು ಸಂಭವಿಸಿದ್ದರೂ, ದಿಲ್ಲಿ ಜನ ಪ್ರತಿಭಟನೆಗೆ ಮುಂದಾಗಿಲ್ಲದಿರುವುದು ನನಗೆ ದಿಗ್ಭ್ರಮೆಯುಂಟುಮಾಡಿದೆ. ಹೌದು, ಎಂ.ಎ.ಎಂ.ಸಿ.ಕಾಲೇಜಿನ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ನಡೆದಾಗ ಇತರ ವಿದ್ಯಾರ್ಥಿಗಳು ತೀವ್ರ ಪ್ರತಿಭಟನೆ ಸಲ್ಲಿಸಿದರು. ಆದರೆ ೧೯೭೮ರ ಪ್ರತಿಭಟನೆಗೆ ಹೋಲಿಸಿದರೆ ಇದು ಏನೂ ಅಲ್ಲ. ಇಂತಹ ಪರಿಸ್ಥಿತಿಗೆ ಸ್ಪಷ್ಟಕಾರಣವೂ ಗೋಚರಿಸುತ್ತಿಲ್ಲ. ಆದರೆ ೬೦–೭೦ರ ದಶಕದಲ್ಲಿ ಕಂಡುಬರುತ್ತಿದ್ದ ವಿದ್ಯಾರ್ಥಿ ಶಕ್ತಿ ಇಂದು ಸರಕಾರೇತರ ಸಂಘಟನೆಗಳೆಂಬ ಲಾಭದಾಯಕ ಮಾರ್ಗಕ್ಕೆ ಮಾರುಹೋಗಿದೆ.

ದುರದೃಷ್ಟವಶಾತ್ ಶಾಲೆ, ಕಾಲೇಜಿನಲ್ಲಿರುವ ನಮ್ಮ ಮುಂದಿನ ತಲೆಮಾರು ಹೋರಾಟ ಮನೋಭಾವನೆಯನ್ನೇ ಕಳೆದುಕೊಂಡಿದೆ. ಕಣ್ಣಿಗೆ ರಾಚುವಂತಹ ಶಾಪಿಂಗ್ ಕಾಂಪ್ಲೆಕ್ಸ್‌ಗಳು, ಮಲ್ಟಿಪ್ಲೆಕ್ಸ್‌ಗಳು ಮತ್ತು ಫಾಸ್ಟ್‌ಫುಡ್ ಜಾಯಿಂಟ್‌ಗಳ ಬಗ್ಗೆ ಸಂಮೋಹಿತಗೊಂಡಿದ್ದು, ಪ್ರತಿಭಟನೆ ಮಾಡಲು ಅವರಿಗೆ ಸಮಯವೇ ಇಲ್ಲದಂತಾಗಿದೆ. ಇಂಡಿಯಾ ಗೇಟ್ ಎದುರು ಮಾರ್ಚ್ ಮಾಡಿದರೂ ಆಡಳಿತ ವರ್ಗ ಕೂಡಲೆ ಸ್ಪಂದಿಸುವುದಿಲ್ಲ. ಇನ್ನು ಬಸ್‌ಗಳ ಟಯರ್‌ಗೆ ಬೆಂಕಿ ಹಚ್ಚುವುದು ಬಾಲಿಶ ಕೃತ್ಯವಾಗಿದೆ. ಆದರೆ ಇಂತಹ ಪ್ರತಿಭಟನೆಗಳು ಸಮಾಜದ ಸಾಂಘಿಕ ಪ್ರಜ್ಞೆಯನ್ನು ಬಡಿದೆಬ್ಬಿಸುತ್ತವೆ. ತಪ್ಪೆಸಗಿದವರ ವಿರುದ್ಧ ಆಕ್ರೋಶ ಭಾವನೆಯನ್ನು ಸೃಷ್ಟಿಸುತ್ತದೆ. ಆದರೂ ಇತ್ತೀಚೆಗೆ ಪ್ರತಿಭಟನೆ ಸಲ್ಲಿಸುವ ಬದಲು ಪೋಲೀಸರ ಮೇಲೆ ಗೂಬೆ ಕೂರಿಸಿ ಕೈ ತೊಳೆದುಕೊಳ್ಳುವಂತಹ ಪ್ರವೃತ್ತಿ ಕಂಡು ಬರುತ್ತಿದೆ.

ಇನ್ನು ಕೆಲವು ವೃತ್ತಿಪರ ಪ್ರತಿಭಟನಾಕಾರರು ಟಿ.ವಿ. ಚಾನಲ್‌ಗಳ ಕ್ಯಾಮರಾಗಳೆದುರು ಹೇಳಿಕೆ ನೀಡಿ, ಇಲ್ಲವೆ ಸುದ್ದಿ ಪತ್ರಿಕೆಗಳಿಗೆ ಲೇಖನ ಬರೆದು ಖುಶಿ ಪಡುತ್ತಾರೆ. ಸರ್ದಾರ್ ಸರೋವರ್ ಯೋಜನೆಯ ವಿರುದ್ಧ ಗುಜರಾತ್‌ನ ಆದಿವಾಸಿಗಳನ್ನು ಸಂಘಟಿಸಿದ ಅರುಂಧತಿ ರಾಯ್ ಅವರ ಲೇಖನವನ್ನು ನಾನು ಔಟ್ ಲುಕ್ ನಲ್ಲಿ ನಿರೀಕ್ಷಿಸುತ್ತಿದ್ದೇನೆ. ಆದರೆ ಆದಿವಾಸಿಗಳನ್ನು ಸಂಘಟಿಸಿದಂತೆ ಅತ್ಯಾಚಾರ ಘಟನೆಯ ವಿರುದ್ಧ ವಿದ್ಯಾರ್ಥಿಗಳನ್ನು ಅರುಂಧತಿ ರಾಯ್ ಸಂಘಟಿಸುವುದಿಲ್ಲ ಎಂದು ಖಂಡಿತಾ ನನಗೆ ತಿಳಿದಿದೆ. ಲಾಭದಾಯಕವಲ್ಲದ ಕಾರ್ಯಕ್ಕೆ ಅರುಂಧತಿರಾಯ್ ಅವರಂತಹ ವ್ಯಕ್ತಿಗಳು ಏಕೆ ಕೈ ಹಾಕುವುದಿಲ್ಲ ಎಂಬುದನ್ನು ನಿಮ್ಮ ಊಹೆಗೆ ಬಿಡುತ್ತೇನೆ.

(ಸಾಭಾರ : ವಿಜಯಕರ್ನಾಟಕ)

***

ಪುಸ್ತಕ ಮಾರುವ ಕಷ್ಟ

–ಡಾ॥ಪಾಟೀಲ ಪುಟ್ಟಪ್ಪ

ಮುಖ್ಯಮಂತ್ರಿ ಕೃಷ್ಣ ಅವರು ಮಾಹಿತಿ ತಂತ್ರಜ್ಞಾನದ ಬೆಳಕನ್ನು ಹಿಡಿದು ನಿಂತಿದ್ದಾರೆ. "ಗರ್ದಿ ಗಮ್ಮತ್ತು ನೋಡು ಮುಂಬಯಿ ನಗರ ನೋಡು" ಎಂದು ಹಳ್ಳಿಗಳಲ್ಲಿ ತನ್ನ ಜಾದೂ ಪೆಟ್ಟಿಗೆ ತೆರೆದು, ಅದರ ಕಿಂಡಿಯಲ್ಲಿ ನೋಡಲು ಹೇಳುತ್ತಿದ್ದ ಮನುಷ್ಯನಂತೆ ಈ ಮುಖ್ಯಮಂತ್ರಿಗಳು ಮಾಹಿತಿ ತಂತ್ರಜ್ಞಾನವನ್ನು ನೋಡಲು ಬನ್ನಿ ಎಂದು ಜಗತ್ತನ್ನೇ ಆಮಂತ್ರಿಸಿ ಕರೆಯತೊಡಗಿದ್ದಾರೆ.

ಆದರೆ ತಾವೇ ಹಿಡಿದ ದೀಪದ ಕೆಳಗೆ ಎಂಥ ಕತ್ತಲು ಕವಿದಿದೆ ಎನ್ನುವುದನ್ನು ತಿಳಿಯಲು ಅವರಿಗೆ ಸಮಯ ಇಲ್ಲ. ಪುಸ್ತಕಗಳನ್ನು ಬರೆಯುವುದೂ, ಅವುಗಳನ್ನು ಮುದ್ರಿಸುವುದೂ ಮತ್ತು ಮಾರಾಟ ಮಾಡುವುದೂ ಕರ್ನಾಟಕದಲ್ಲಿ ಅಪರಾಧವೆನಿಸಿದೆ.

ಹಿಟ್ಲರನ ಜರ್ಮನಿಯಲ್ಲಿ ಕೂಡ ಕೃಷ್ಣ ಸರಕಾರದಲ್ಲಿ ಇರುವ ಮನುಷ್ಯ ಇರಲಿಲ್ಲ.ಒಂದು ವೇಳೆ ಅಂಥವನು ಇದ್ದಿದ್ದರೆ ಅವನು ಕತ್ತಲೆಯನ್ನು ಮಾರಾಟ ಮಾಡುವ ಈ ಜನರನ್ನು ಹಿಡಿದು ಅಜ್ಞಾನಕ್ಕೆ ಸಮಾನವಾದುದು ಯಾವುದೂ ಇಲ್ಲ ಎಂದು ಹೇಳಿ ಅದನ್ನು ಪ್ರಚುರಪಡಿಸಲು ಸರಕಾರದಲ್ಲಿ ಒಂದು ಪ್ರತ್ಯೇಕ ಮಂತ್ರಿ ಶಾಖೆಯನ್ನೇ ಸ್ಥಾಪಿಸುತ್ತಿದ್ದ. ಇಲ್ಲಿ ಕೃಷ್ಣ ಸರಕಾರವು ಜ್ಞಾನವನ್ನು ದಂಡಿಸಲು ಒಂದು ಪ್ರತ್ಯೇಕ ಶಾಖೆಯನ್ನು ಇನ್ನೂ ಆರಂಭಿಸಿಲ್ಲ. ಆ ಕೆಲಸವನ್ನು ಅದು ಗ್ರಂಥಾಲಯ ಇಲಾಖೆಯಿಂದ ಮಾಡಿಸತೊಡಗಿದೆ. ಆ ಇಲಾಖೆಯ ಮೂಲಕ ಪುಸ್ತಕಗಳನ್ನು ಕೊಳ್ಳಲು ಅದು ಮಾಡಿರುವ ಏರ್ಪಾಡನ್ನು ನೋಡಿದರೆ ಸರಕಾರದಲ್ಲಿ ಮೂರ್ಖರೂ ಹುಚ್ಚರೂ ತುಂಬಿಕೊಂಡಿದ್ದಾರೆನ್ನುವುದು ಖಚಿತಪಡುತ್ತದೆ.

ಬಹುಶಃ ಇಂಥ ಮಾದರಿಯು ಭಾರತದ ಯಾವ ರಾಜ್ಯದಲ್ಲಿಯೂ ಜಗತ್ತಿನ ಯಾವ ದೇಶದಲ್ಲಿಯೂ ಇದ್ದಂತೆ ಇಲ್ಲ. ಪುಸ್ತಕ ಮಾರಾಟವನ್ನು ಪ್ರತಿಬಂಧಿಸಿ ಜ್ಞಾನದ ಬಾಗಿಲನ್ನು ಮುಚ್ಚುವ ಜನರನ್ನು ತಮ್ಮ ಸರಕಾರದಲ್ಲಿ ಕೃಷ್ಣರು ಸೇರಿಸಿಕೊಂಡು; ಯಾರೂ ಮಾಡದೇ ಇರುವುದನ್ನು ನಾನು ಮಾಡುತ್ತಿದ್ದೇನೆ, ನೋಡಲು ಬನ್ನಿರಿ, ಎಂಬಂತೆ ಹೊರಟಿದ್ದಾರೆ. ಸರಕಾರ ದಲ್ಲಿರುವ ಮೂರ್ಖಹುಚ್ಚರು ಮಾಡಿರುವ ಕೆಲಸವನ್ನು ನಮ್ಮ ಜನರಿಗೆ

ತಿಳಿಸಿ ಹೇಳಬೇಕು. ಆತ್ಮಗೌರವ ಇರುವ ಯಾವ ಮನುಷ್ಯನೂ ಸರಕಾರದ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಮಾರುವುದಿಲ್ಲ. ಯಾರೂ ಪುಸ್ತಕಗಳನ್ನು ಮಾರದಂಥಹ ವ್ಯವಸ್ಥೆಯನ್ನು ನಿರ್ಮಿಸಿರುವ ಸರಕಾರಕ್ಕೆ ಏನು ಮಾಡಬೇಕೆನ್ನುವುದನ್ನು ಯಾರು ಹೇಳಬಲ್ಲಿರಿ?

ಕೃಷ್ಣ ಅವರು ಗ್ರಂಥಾಲಯ ಇಲಾಖೆಗೆ ಗ್ರಂಥದ ಗಂಧ ಗೊತ್ತಿಲ್ಲದ ಒಬ್ಬ ಮಂತ್ರಿಯನ್ನು ನೇಮಿಸಿದ್ದಾರೆ. ಆ ಮಂತ್ರಿ ಧಾರವಾಡದಲ್ಲಿ ರಾಷ್ಟ್ರೀಯ ಪುಸ್ತಕ ಮೇಳವನ್ನು ಉದ್ಘಾಟಿಸುತ್ತ ತಾವು ಒಂದೂ ಪುಸ್ತಕವನ್ನು ಓದಿಲ್ಲವೆಂಬ ಹೆಮ್ಮೆಯನ್ನು ಹೇಳಿಕೊಂಡರು. ಇದು ಪಾವಿತ್ರ್ಯದ ಪಾಠವನ್ನು ಹೇಳಲು ನಿತ್ಯ ಸುಮಂಗಲೆಯನ್ನು ನೇಮಿಸಿದಂತೆಯೇ ಇದೆ. ಗ್ರಂಥಾಲಯ ಇಲಾಖೆಯು ಪುಸ್ತಕಗಳನ್ನು ಕೊಳ್ಳುವುದಕ್ಕೋಸುಗ ಪುಸ್ತಕ ಮಾರಾಟಗಾರರಿಂದ ಏನೇನನ್ನು ತಿಳಿಯಬೇಕೆಂದು ಅಪೇಕ್ಷಿಸಿದೆ ಎಂಬುದು ಕತ್ತೆಗೆ ತಿಳಿದರೆ ಅದಕ್ಕೆ ಖಂಡಿತವಾಗಿಯೂ ಜ್ವರ ಬರುತ್ತದೆ.

ಒಬ್ಬ ಪ್ರಕಾಶಕ ಹತ್ತಿಪ್ಪತ್ತು ಪುಸ್ತಕಗಳನ್ನು ಪ್ರಕಟಿಸಿದರೆ, ಅವನು ಪ್ರತಿಯೊಂದು ಪುಸ್ತಕದ ಮಾರಾಟದ ಬಗೆಗೂ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕು. ಆ ಒಂದೊಂದು ಅರ್ಜಿಗೂ ಅವನು ತನ್ನ ಭಾವ ಚಿತ್ರವನ್ನು ಅಂಟಿಸಿಕೊಳ್ಳಬೇಕು. ಒಂದೇ ಅರ್ಜಿಯಲ್ಲಿ ಅವನು ತನ್ನಲ್ಲಿ ಇಂತಿಂಥ ಪುಸ್ತಕಗಳು ಮಾರಾಟಕ್ಕಿವೆಯೆಂದು ಹೇಳಿದರೆ ಆಗುವುದಿಲ್ಲ.

ಪ್ರಕಾಶಕನಿಗೆ ಪ್ರಕಟಣೆಗೋಸುಗ ಒಂದು ಪುಸ್ತಕ ಬರೆದು ಕೊಡುವ ಲೇಖಕನು, ತನ್ನ ಪುಸ್ತಕ ಪ್ರಕಟಗೊಂಡು ಮಾರಾಟಗೊಳ್ಳದೆ ಅದು ಪ್ರಕಾಶಕನ ಮನೆಯಲ್ಲಿಯೇ ಇರಬೇಕೆಂದು ಬಯಸಿರುವುದಿಲ್ಲ. ಪುಸ್ತಕವನ್ನು ಮುದ್ರಿಸಿ ಮನೆಯಲ್ಲಿ ಇರಿಸಿಕೊಳ್ಳಬೇಕೆಂದು ಯಾವ ಪ್ರಕಾಶಕನೂ ಇಚ್ಛಿಸಿರುವುದಿಲ್ಲ.

ತಾನು ಪ್ರಕಟಿಸಿದ ಪುಸ್ತಕವನ್ನು ಮಾರಾಟಕ್ಕೆ ತರಬೇಕಾದರೆ, ಪ್ರಕಾಶಕನು ಆ ಪುಸ್ತಕ ಬರೆದ ಲೇಖಕನಿಂದ ತನ್ನ ಪುಸ್ತಕವನ್ನು ಮಾರಾಟ ಮಾಡಬಹುದೆನ್ನುವ ಒಪ್ಪಿಗೆಯ ಪತ್ರವನ್ನೂ ಕೂಡ ತನ್ನ ಅರ್ಜಿಗೆ ಅಗತ್ಯವಾಗಿ ಲಗತ್ತಿಸಿರಬೇಕು. ಲೇಖಕನು ಇಂಗ್ಲೆಂಡ್, ಅಮೇರಿಕಾ, ಆಷ್ಟ್ರೇಲಿಯಾ, ದುಬೈ, ದಿಲ್ಲಿ ಇಲ್ಲವೇ ಟಿಂಬಕ್ಟುವಿನಲ್ಲಿದ್ದರೆ ಅಲ್ಲಿಂದ ಅವನ ಒಪ್ಪಿಗೆ ಪತ್ರವನ್ನು ತರಬೇಕು.

ಪ್ರತಿಯೊಂದು ಅರ್ಜಿಗೂ ೨೫ ರೂಪಾಯಿಗಳ ಶುಲ್ಕ ತುಂಬಬೇಕು. ಇಷ್ಟಾದರೂ ಅರ್ಜಿಯ ವಿಧಿ ವಿಧಾನ ಮುಗಿಯುವುದಿಲ್ಲ. ತನ್ನ ಪ್ರತಿಯೊಂದು ಅರ್ಜಿಗೂ ಅವನು ಒಬ್ಬ ಗೆಜೆಟೆಡ್ ಅಧಿಕಾರಿಯ ಸಹಿ ಪಡೆಯಬೇಕು. ಅರ್ಜಿಗೆ ಅಂಕಿತ ಹಾಕುವ ಆ ಅಧಿಕಾರಿ ತನ್ನ ಪಾಲಿನ ಪೌಂಡು ಮಾಂಸವನ್ನು ಪಡೆಯದೆ ಬಿಡುವುದಿಲ್ಲ. ಪ್ರಕಾಶಕನಿಂದ ಅವನು ಮಾರಬೇಕೆಂದಿರುವ

ಪುಸ್ತಕದ ಒಂದೊಂದು ಪ್ರತಿಯನ್ನು ಕೀಳುತ್ತಾನೆ.

ಈ ವಿಘ್ನಗಳ ಓಟವನ್ನು (ಹರ್ಡಲ್ಸ್‌ರೇಸ್) ದಾಟಿದ ಮೇಲೆ ಪುಸ್ತಕಗಳನ್ನು ಓದದೇ ಇರುವ ಸಂಸ್ಕೃತಿಯನ್ನು ಬೆಳೆಸಿಕೊಂಡಿರುವ ರಾಜಕೀಯ ಜನರ ಒಂದು ಸಮಿತಿ, ಪುಸ್ತಕಗಳನ್ನು ಆಯ್ಕೆ ಮಾಡುವ ಕಸರತ್ತು ನಡೆಸುತ್ತದೆ. ಆ ಸಮಿತಿ ಶಿಫಾರಸು ಮಾಡಿದ ಪುಸ್ತಕಗಳನ್ನು ಕೊಳ್ಳಲು ಗ್ರಂಥಾಲಯ ಇಲಾಖೆ ಕ್ರಮ ಕೈಗೊಂಡು ಐವತ್ತೋ, ನೂರೋ, ಇನ್ನೂರೋ ಪ್ರತಿಗಳನ್ನು ಕೊಳ್ಳುತ್ತದೆ.

ಆ ಮೇಲೆ ಆ ಪುಸ್ತಕಗಳ ಹಣವನ್ನು ಗ್ರಂಥಾಲಯ ಇಲಾಖೆಯಿಂದ ಪ್ರಕಾಶಕರು ಪಡೆಯಬೇಕಾದರೆ ಕುರಿಕೋಣ ಬಿದ್ದುಹೋಗುತ್ತವೆ. ಅವನು ಅನೇಕ ಬಗೆಯ ಹೆರಿಗೆಯ ನೋವುಗಳನ್ನು ಅನುಭವಿಸಬೇಕಾಗುತ್ತದೆ. ತನ್ನ ಪುಸ್ತಕ ಮಾರಾಟದ ಚಕ್ಕು ಪ್ರಕಾಶಕನ ಕೈಗೆ ಬರಬೇಕಾದರೆ ಅವನು ನೂರಕ್ಕೆ ಇಂತಿಷ್ಟು ಎಂದು ಆ ಚೆಕ್ ಕೊಡುವವನ ಬಾಯಿಗೆ ಸುರಿಯ ಬೇಕಾಗುತ್ತದೆ.

ಭ್ರಷ್ಟಾಚಾರವನ್ನು ಗ್ರಂಥಾಲಾಯ ಇಲಾಖೆಯಲ್ಲಿ ಒಂದು ಕುಶಲ ಕಲೆಯಂತೆ ಬೆಳೆಸಿಕೊಂಡು ಬರಲಾಗಿದೆ. ಲೋಕಾಯುಕ್ತರ ಗಮನ ಅತ್ತ ಕಡೆಗೆ ಯಾವಾಗ ಹರಿಯುತ್ತದೆಯೋ ಎನ್ನುವುದನ್ನು ಯಾರು ಬಲ್ಲರು?

(ಸಾಭಾರ: ಪ್ರಜಾವಾಣಿ)

ವಿರೋಧಕ್ಕೆ ಹೆದರಬೇಡಿ, ವಿರುದ್ಧ ದಿಕ್ಕಿನ ಗಾಳಿಯನ್ನವಲಂಬಿಸಿಯೇ ಗಾಳಿಪಟ ಮೇಲೆ ಹಾರುತ್ತದೆಂಬುದನ್ನು ನೆನಪಿಟ್ಟುಕೊಳ್ಳಿ.

–ಹ್ಯಾಮಿಲ್ಟನ್ ಮಾಬಿ.

ಜೇಪಿ ದೃಷ್ಟಿಯಲ್ಲಿ ಪಂಚಾಯತ್ ರಾಜ್ಯ

ಸ್ವತಂತ್ರ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಪಂಚಾಯತ್ ರಾಜ್ಯದ ಸ್ಥಾನವೇನೆಂಬ ಬಗ್ಗೆ ಸಂವಿಧಾನ ರಚನಾ ಸಭೆಯಲ್ಲಿ ನಡೆದಂತಹ ಚರ್ಚೆಯನ್ನು ಸಂಗ್ರಹಿಸಿ ಅದನ್ನು ಪ್ರಕಾಶಕ್ಕೆ ತಂದು ಇತಿಹಾಸಜ್ಞರಾದ ಶ್ರೀಧರ್ಮಪಾಲ್‌ರವರು ಮಹದುಪಕಾರ ಮಾಡಿದ್ದಾರೆ.

ಆ ಸಾಹಿತ್ಯವು ಭಾರತೀಯ ಪ್ರಜಾಪ್ರಭುತ್ವದ ಬಗ್ಗೆ ಕಿಂಚಿತ್ತಾದರೂ ಆಸಕ್ತಿ ಇರುವಂತಹ ಯಾವುದೇ ವ್ಯಕ್ತಿಯ ಹೃದಯವನ್ನು ದು:ಖಭರಿತರನ್ನಾಗಿಸುತ್ತದೆ. ಸ್ವಾತಂತ್ರ್ಯದ ಹೋರಾಟದಲ್ಲಿ ತೊಡಗಿದ್ದಂಥವರ ಮೇಲೆ ಗಾಂಧೀಜಿಯವರ ಪ್ರಭಾವವಿದ್ದುದರಿಂದ ಭಾರತಕ್ಕೆ ಸ್ವರಾಜ್ಯ ಬಂದ ಮೇಲೆ ಅದರ ಅಡಿಪಾಯವು ಗ್ರಾಮರಾಜ್ಯವೇ ಆಗಿರುತ್ತದೆಂಬುದನ್ನು ಎಲ್ಲರೂ ಅಂದುಕೊಂಡಿದ್ದರು. ರಾಜಕೀಯ ಮತ್ತು ಆರ್ಥಿಕ ವಿಕೇಂದ್ರೀಕರಣ ಸ್ವಾತಂತ್ರ್ಯ ಹೋರಾಟಗಾರರಿಗೆ ಒಂದು ಸಿದ್ಧಾಂತವೇ ಆಗಿತ್ತು. ಆದರೆ ಪ್ರತ್ಯಕ್ಷವಾಗಿ ಸಂವಿಧಾನದ ರಚನೆಯಾಗುವ ಸಮಯದಲ್ಲಿ ಆ ಸಿದ್ಧಾಂತ ಹೇಗೋ ಮರೆಯಲ್ಪಟ್ಟಿತು. ಅಥವಾ ಇನ್ನೂ ನಿಖರವಾಗಿ ಹೇಳುವುದಾದರೆ ಪಂಚಾಯತ್ ರಾಜ್ಯದ ವಿಚಾರ ಆನಂತರ ಹೊಳೆದ ವಿಚಾರವಾಗಿತ್ತು! ಆಡಳಿತ ಪಕ್ಷದಲ್ಲಿರುವವರು ಆಗಾಗ್ಗೆ ಗಾಂಧೀಜಿಯವರನ್ನು ಹೊಗಳುತ್ತಾ ಆಚರಣೆಯಲ್ಲಿ ಮರೆಯುತ್ತಿರುವಂತಹ ಪದ್ಧತಿ ನಮಗೆ ಸ್ವಾತಂತ್ರ್ಯ ಬಂದಗಳಿಗೆಯಿಂದಲೇ ಇದೆಯೆಂದು ಕಾಣುತ್ತದೆ: ಆಗ ಗಾಂಧೀಜಿ ಇದ್ದರು.

ಬಹುಶಃ ರಾಜಕೀಯ ನಾಯಕರ ಮನಸ್ಸಿನ ಒಳ ಪದರದಲ್ಲಿ ಬೇರೊಂದು ವಿಚಾರ ಇದ್ದಿರಬಹುದು, ಅದೇನೆಂದರೆ ಇಂಗ್ಲೀಷರ ಆಳ್ವಿಕೆಯಲ್ಲಿ ಭಾರತೀಯರು ನಿರಾಸಕ್ತರಾಗಿದ್ದ ಪರಿಸ್ಥಿತಿಯಲ್ಲಿ ಗಾಂಧೀಜಿಯವರ ಸತ್ಯಾಗ್ರಹದ ತಂತ್ರ ಮತ್ತು ಜ್ಞಾನ ಸ್ವಾತಂತ್ರ್ಯ ಪಡೆಯಲು ಮಾತ್ರ ಉಪಯುಕ್ತವಾಗಿದ್ದವು. ಸ್ವಾತಂತ್ರ್ಯೋತ್ತರ ಭಾರತದ ನಿರ್ಮಾಣದ ಕೆಲಸದಲ್ಲಿ ಅವುಗಳಿಗೆ ಸ್ಥಾನವಿಲ್ಲ. ಒಂದು ವೇಳೆ ಅಂತಹ ಸಲಹೆ ಏನಾದರೂ ಮುಂದೆ ಬಂದಿದ್ದರೆ ಅದನ್ನು ಅವರು ತಮ್ಮ ಅವಮಾನವೋ ಏನೋ ಎಂಬಂತೆ ತಿರಸ್ಕರಿಸುತ್ತಿದ್ದರು. ಮನದ ಒಳ ಪದರದಲ್ಲಿದ್ದ ಈ ವಿಚಾರವೇ ಸ್ವಾತಂತ್ರ್ಯದ ನಂತರ ಬಂದ ಹೊಸ ಆಡಳಿತಗಾರರ ವ್ಯವಹಾರಿಕ ರಾಜಕಾರಣದ ಮೇಲೆ ಪ್ರಭಾವ ಬೀರಿರಬಹುದೆಂಬುದು ನನ್ನ ಶಂಕೆ.

ಇದು ಹೇಗೇ ಇರಲಿ. ಸಂವಿಧಾನದ ರಚನೆಯ ಕೆಲಸ ವಕೀಲರಿಗೆ ಮತ್ತು ಸಂವಿಧಾನತಜ್ಞರಿಗೆ ಮಾತ್ರ ಸಂಬಂಧಿಸಿದ ಸಂಗತಿ ಎಂದು ಭಾವಿಸಿದ್ದು ಒಂದು ರೀತಿಯಲ್ಲಿ ವಿಲಕ್ಷಣವಾದ ಸಂಗತಿ. ಯಶಸ್ವಿಯಾದ ಕ್ರಾಂತಿಗಳ ನಂತರ ರಚಿಸಲ್ಪಟ್ಟ ಎಲ್ಲಾ ಸಂವಿಧಾನಗಳೂ ಆಯಾ ದೇಶದ ಕ್ರಾಂತಿಕಾರಿ ನಾಯಕರ ಕೆಲಸವಾಗಿತ್ತು. ತಜ್ಞರು ಕೇವಲ ಶಾಸನದ ಚೌಕಟ್ಟನ್ನು ಒದಗಿಸಿದ್ದರು. ಆದರೆ ದುರಾದೃಷ್ಟವಶಾತ್ ನಮ್ಮ ವಿಷಯದಲ್ಲಿ ಹೇಳುವುದಾದರೆ ಸಂವಿಧಾನ ರಚನೆಗೆ ತೊಡಗಿದ್ದ ಮೇಧಾವಿ ವಕೀಲರು ತಮ್ಮ ಮೇಲಿನ ಜವಾಬ್ದಾರಿಯನ್ನು ಕೇವಲ ನಿಮಿತ್ತಮಾತ್ರವಾಗಿ ನೆರವೇರಿಸಿದರು. ಈ ಸಂಗತಿ ನಮಗೆ ಶ್ರೀ ಟಿ.ಟಿ.ಕೃಷ್ಣಮಾಚಾರಿಯವರ ವಿಷಾದದ ಮಾತಿನಲ್ಲಿ ಕಂಡು ಬರುತ್ತದೆ.

ಗತಕಾಲದಲ್ಲಿ ನಡೆದು ಹೋದ ಚರ್ಚೆಯಲ್ಲಿ ಹುದುಗಿದ್ದ ನೀರಸವಾದ ಸಂಗತಿಗಳನ್ನು ಹೊರ ತೆಗೆಯುವಂತಹ ಉದ್ದೇಶ ಶ್ರೀಧರ್ಮಪಾಲ್‌ರವರಿಗೆ ಇರಲಿಲ್ಲ. ಏಕೆಂದರೆ ಆ ಹೊತ್ತಿಗಾಗಲೇ ಬಲವಂತರಾಯ್ ಮೆಹತಾ ಕಮಿಟಿ ಮತ್ತು ೧೯೫೯ರಲ್ಲಿ ರಾಜಸ್ಥಾನದಲ್ಲಿ ಪಂಚಾಯತ್ ರಾಜ್ಯ ಪ್ರಾರಂಭವಾಗಿ ವಿಕೇಂದ್ರೀಕೃತ ಆರ್ಥಿಕ ಮತ್ತು ರಾಜಕೀಯ ಪ್ರಜಾಪ್ರಭುತ್ವದಲ್ಲಿ ಆಸಕ್ತಿ ತೀವ್ರಗೊಳ್ಳುತ್ತಾ ಹೋಗುತ್ತಿತ್ತು. ಈ ಆಸಕ್ತಿಗೆ ಪೂರಕವಾಗುವಂತೆ ಧರ್ಮಪಾಲ್‌ರವರು ಈ ಸಾಹಿತ್ಯವನ್ನು ಹೊರತಂದಿದ್ದಾರೆ. ನಮ್ಮ ಸ್ವಾತಂತ್ರ್ಯದ ವಿಶೇಷತೆ ನಮ್ಮ ಜನರ ಮನಸ್ಸಿನಲ್ಲಿ ಅಚ್ಚ ಹಸಿರಿರುವಾಗಲೇ ಧರ್ಮಪಾಲ್‌ರವರ ಈ ಶೋಧನೆ ಮನಸ್ಸಿಗೆ ಹೊಸತನವನ್ನು ತಂದುಕೊಡುವುದು.

ಇಲ್ಲಿ ನಾನು ಅರ್ಥೈಸುವಂತೆ ಎರಡು ಸಂಪೂರ್ಣ ಭಿನ್ನವಾದ ಸಮಾಜದ ಕಲ್ಪನೆಗಳಿವೆ. ಇವುಗಳ ಬಗ್ಗೆ ಸ್ಪಷ್ಟವಾಗಿ ವಿವರಣೆ ಇಲ್ಲದೆ ಹೋದರೂ ಈ ವಿಷಯವಾಗಿ ಗಾಂಧೀಜಿಯವರೊಂದಿಗಿನ ಚರ್ಚೆಯಲ್ಲಿ ಇದು ಸ್ಪಷ್ಟವಾಗಿಯೇ ಇತ್ತು. ಅವುಗಳಲ್ಲಿ ಒಂದು, ಸಮಾಜದ ಕಲ್ಪನೆ ಡಾ॥ ಅಂಬೇಡ್ಕರ್‌ರವರಿಂದ ಮಂಡಿಸಲ್ಪಟ್ಟಿತು ಮತ್ತು ಅದನ್ನೇ ಸಂವಿಧಾನದ ಆಧಾರವೆಂದು ಅಂಗೀಕರಿಸಲಾಯಿತು. ಆ ಕಲ್ಪನೆ ಏನೆಂದರೆ ಅಸಂಘಟಿತವಾದ ಮತ್ತು ಅಚೇತನವಾದ ಸಮಾಜದ ಕಲ್ಪನೆ. ಈ ಪ್ರಕಾರದ ಕಲ್ಪನೆಯೇ ಪಾಶ್ಚಿಮಾತ್ಯರ ರಾಜ್ಯಶಾಸ್ತ್ರ ಮತ್ತು ಅದರ ಪಾಲನೆ ಮೇಲೆ ಪ್ರಭಾವ ಬೀರಿದೆ. ಇದಕ್ಕೆ ಅತ್ಯಂತ ಮಹತ್ವದ ಕಾರಣವೆಂದರೆ ಪಾಶ್ಚಿಮಾತ್ಯ ದೇಶಗಳು ಸ್ವತಃ ಒಂದು ಪ್ರಕಾರದ ಕೈಗಾರಿಕೆ ಮತ್ತು ಆರ್ಥಿಕ ವ್ಯವಸ್ಥೆಯ ಕಾರಣದಿಂದ ರಚಿತವಾದುದಾಗಿದೆ. ಆ ವ್ಯವಸ್ಥೆ ವಿಘಟಿತಗೊಂಡು ಜನರ ಸಮೂಹವಾಗಿದೆ. ಆದ್ದರಿಂದ ರಾಜ್ಯಶಾಸ್ತ್ರ ಮತ್ತು ಅದರ ಅನುಷ್ಠಾನ

ಸ್ವಾಭಾವಿಕವಾಗಿ ಸಮಾಜದ ಈ ಸ್ಥಿತಿಯನ್ನೇ ಬಿಂಬಿಸುತ್ತದೆ. ಅಲ್ಲದೆ ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಜಾಪ್ರಭುತ್ವವು ಕೇವಲ ತಲೆಗಳ ಎಣಿಕೆಯ ಮಟ್ಟಕ್ಕೆ ಇಳಿದಿದೆ. ಇಂತಹ ಪರಿಸ್ಥಿತಿಯಲ್ಲಿ ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ ಪರಸ್ಪರ ಸ್ಪರ್ಧಿಸುವ ಗುಂಪುಗಳಾಗಿ ರೂಪುಗೊಂಡವು. ತತ್ಪರಿಣಾಮವಾಗಿ ಜನತೆಯಿಂದ ರಚಿತವಾದ ಸರ್ಕಾರವಾಗದೇ ಪಕ್ಷದಿಂದ ರಚಿತವಾದ ಸರ್ಕಾರದ ಸ್ಥಾಪನೆಯಾಯಿತು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಅಧಿಕಾರದಾಹವುಳ್ಳ ಸಮೂಹದಿಂದ ಸರ್ಕಾರದ ರಚನೆಯಾಯಿತು.

ಎರಡನೆಯ ಕಲ್ಪನೆ ಸಚೇತನವಾದುದು ಅಥವಾ ಸಾಮೂಹಿಕ ವಾದುದು. ಈ ಪ್ರಕಾರದ ಕಲ್ಪನೆಯ ಸಮಾಜದಲ್ಲಿ ಒಬ್ಬ ಜವಾಬ್ದಾರಿಯುತ ಸದಸ್ಯನನ್ನಾಗಿ ಪ್ರತಿಯೊಬ್ಬ ವ್ಯಕ್ತಿಯನ್ನು ಅವನದೇ ಆದ ಸಾಮಾಜಿಕ ಪರಿಸರದಲ್ಲಿ ಇರಿಸುತ್ತದೆ. ಈ ದೃಷ್ಟಿಯಲ್ಲಿ ಮನುಷ್ಯ ಅಚೇತನವಾದ ಮರಳಿನ ರಾಶಿಯ ಒಂದು ಕಣವಾಗಿರದೆ, ವಿಶಾಲವಾದ ಚೈತನ್ಯಯುಕ್ತ ಸಮಾಜದ ಒಂದು ಭಾಗವಾಗಿರುತ್ತಾನೆ. ಆದ್ದರಿಂದ ಈ ದೃಷ್ಟಿಯಲ್ಲಿ ವ್ಯಕ್ತಿಯ ಹಕ್ಕಿಗಿಂತ ಅವನ ಜವಾಬ್ದಾರಿಯ ಮೇಲೆ ಹೆಚ್ಚು ಒತ್ತನ್ನು ಕೊಡಬೇಕಾಗುತ್ತದೆ. ಯಾವಾಗ ಒಬ್ಬ ವ್ಯಕ್ತಿ ಸಮಾಜದಲ್ಲಿ ಬೇರೆಯವರೊಂದಿಗೆ ಬೆರೆಯುತ್ತಾನೋ ಆಗ ಅವನ ಹಕ್ಕುಗಳೆಲ್ಲ ಅವನು ನಿರ್ವಹಿಸುವ ಜವಾಬ್ದಾರಿಗಳಿಂದ ಬರತಕ್ಕಂತಹವು ಆಗಿರುತ್ತದೆ. ಇನ್ನಾವ ಬೇರೆ ರೀತಿಯಲ್ಲಲ್ಲ. ಆದ್ದರಿಂದಲೇ ಗಾಂಧಿಯವರ ಸಾಮಾಜಿಕ ವಿಚಾರದಲ್ಲಿ ಯಾವಾಗಲೂ ಹೊಣೆಗಾರಿಕೆಯ ಮೇಲೆಯೇ ಹೆಚ್ಚು ಒತ್ತು ಇರುತ್ತದೆ. ಯಾವುದೇ ಒಂದು ಸಮಾಜ ನಿಜವಾದ ಅರ್ಥದಲ್ಲಿ ಸಮಾಜ ವೆಂದೆನಿಸಿಕೊಳ್ಳಬೇಕಾದರೆ, ಅದು ತನ್ನ ಆಂತರಿಕ ಜೀವನದಲ್ಲಿ ಅನ್ಯೋನ್ಯತೆ, ರಾಜಿ ಮಾಡಿಕೊಳ್ಳುವಿಕೆ, ಸಮರಸತೆ ಮತ್ತು ಸಹಕಾರ ಮುಂತಾದ ನೈತಿಕ ಮೌಲ್ಯಗಳನ್ನು ಹೊಂದಿರಬೇಕಾಗುತ್ತದೆ. ಈ ಮೌಲ್ಯಗಳಿಲ್ಲದಿದ್ದರೆ ಸಮಾಜವೆಂಬುದಿರುವುದಿಲ್ಲ. ಸಮಾಜ ಎಂದೂ ತನ್ನ ವಿರುದ್ಧ ತಾನೇ ಕಾದಾಟದ ಸ್ಥಿತಿಯಲ್ಲಿರಲಾರದು. ಅದು ಪ್ರಜಾಪ್ರಭುತ್ವದ ರೀತಿಯಲ್ಲಿಯೇ ಇರಬಹುದು ಅಂದರೆ ಬಹುಸಂಖ್ಯಾತರು ಅಲ್ಪ ಸಂಖ್ಯಾತರ ಮೇಲೆ ಆಡಳಿತ ನಡೆಸುವಂತದ್ದೇ ಆಗಿರಬಹುದು.

ಈ ಪ್ರಕಾರದ ರಾಜಕೀಯ ಕಾಳಗ ಕೇವಲ ಜನ ನಿಬಿಡವಾದ ಸಮಾಜದಲ್ಲಿ ಮಾತ್ರ ಸಾಧ್ಯ. ಅಂದರೆ ಎಲ್ಲಿ ಸಮುದಾಯದ ಭಾವನೆ ಇಲ್ಲವೋ ಅಲ್ಲಿ. ಇದರರ್ಥ ಭಿನ್ನಾಭಿಪ್ರಾಯಗಳಾಗಲೀ, ವಿವಿಧ ಆಸಕ್ತಿಗಳಾಗಲೀ ಇರುವುದಿಲ್ಲವೆಂದಲ್ಲ. ಆದರೆ ಆ ಭಿನ್ನಾಭಿಪ್ರಾಯಗಳನ್ನು

ಹೊಂದಾಣಿಕೆಯ ಮೂಲಕ ಸಮರಸವನ್ನು ಸಾಧಿಸಬೇಕು. ತನ್ಮೂಲಕ ಸಮುದಾಯ ಮತ್ತು ಅದರ ಪ್ರತಿಯೊಬ್ಬ ಸದಸ್ಯ ಜೀವಿಸುವುದರ ಜೊತೆಗೆ ಅಭಿವೃದ್ಧಿಯನ್ನೂ ಸಾಧಿಸುತ್ತಾ ಭೌತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ರೂಪುಗೊಳಬೇಕು. ಈಗಾಗಬೇಕಾದುದೇನೆಂದರೆ ಇಂತಹ ಉದ್ದೇಶವನ್ನು ಸಾಧಿಸಬಲ್ಲಂತಹ ರಾಜಕೀಯ ಮತ್ತು ಆರ್ಥಿಕ ಸಾಧನಗಳನ್ನು ಕಂಡುಹಿಡಿಯುವುದು ಅಥವಾ ಈ ಕೆಲಸವನ್ನು ಸಾಧಿಸಬಲ್ಲ ಪ್ರಕ್ರಿಯೆಯನ್ನು ಕಂಡು ಹಿಡಿಯುವುದು. ಪಂಚಾಯತ್ ರಾಜ್ಯದ ಪರವಾಗಿ ಮಾತನಾಡುವಂತವರು ರಾಜಕೀಯ ಮತ್ತು ಆರ್ಥಿಕ ವಿಕೇಂದ್ರಿಕರಣದಂತಹ ಮಾತುಗಳ ಆಚೆಗೆ ತಮ್ಮ ದೃಷ್ಟಿಯನ್ನು ವಿಸ್ತರಿಸಬೇಕಾದ ಸಮಯ ಬಂದಿದೆ. ಪಂಚಾಯತ್ ರಾಜ್ಯದ ಪರವಾಗಿರುವ ಈ ಜನರು ಸಂಸದೀಯ ಪ್ರಜಾಪ್ರಭುತ್ವದ ಮೂಲಕ ಮತ್ತು ಸ್ಥಳೀಯ ಸರಕಾರಗಳ ಮೂಲಕ ಪಂಚಾಯತ್ ರಾಜ್ಯವನ್ನು ಸ್ಥಾಪಿಸ ಬಹುದೆಂದೂ ತನ್ಮೂಲಕ ತಮ್ಮ ಕನಸಿನ ಪ್ರಜಾಪ್ರಭುತ್ವವನ್ನು ಅನಾವರಣಗೊಳಿಸಬಹುದೆಂದೂ ಹುಚ್ಚು ನಿರೀಕ್ಷಣೆಯಲ್ಲಿದ್ದಾರೆ. ಸಮುದಾಯ ಜೀವನದೃಷ್ಟಿಯ ಸಮಾಜವೆಂಬುದು ಹಳ್ಳಿ ಅಥವಾ ಒಂದು ಸಣ್ಣ ಊರಿನಂತಹ ಪ್ರಾಥಮಿಕ ಸಮುದಾಯ ದೊಂದಿಗೆ ಪ್ರಾರಂಭವಾಗಲಿ ಅಥವ ಮುಕ್ತಾಯವಾಗಲಿ ಆಗುವುದಿಲ್ಲ. ಈ ಸಂಧರ್ಭದಲ್ಲಿ ಗಾಂಧೀಜಿಯವರು ಪ್ರತಿಪಾದಿಸಿದ್ದ ಸಾಗರದಲ್ಲಿಯ ವರ್ತುಲಗಳ ಕಲ್ಪನೆಯನ್ನು ನಾವು ಇಲ್ಲಿ ಜ್ಞಾಪಿಸಿ ಕೊಳ್ಳಬಹುದು. ಹೊರವರ್ತುಲವನ್ನು ಗಾಂಧೀಜಿ ಸಾಗರಾಂತರ್ಗತ ವರ್ತುಲಕ್ಕೆ ಹೋಲಿಸಿದ್ದರು. ಅಂದರೆ ಆ ವರ್ತುಲವು ಇಡೀ ಮಾನವ ಜನಾಂಗವನ್ನು ಸ್ಪರ್ಶಿಸುತ್ತದೆ. ಯಾವ ರೀತಿ ಪ್ರಾಥಮಿಕ ಸಮುದಾಯದಲ್ಲಿ ಹೊಂದಾಣಿಕೆ, ರಾಜಿ, ಸಮರಸ ಮತ್ತು ಸಹಕಾರಗಳು ಗುರಿಯಾಗಿರುತ್ತವೋ ಅದೇ ರೀತಿ ವಿಶ್ವದಲ್ಲಿರುವ ಎಲ್ಲರ ಹಿತ ದೃಷ್ಟಿಯಿಂದ ಬೇರೆ ಬೇರೆ ವೃತ್ತಗಳ ಮಧ್ಯೆಯೂ ಸಂಬಂಧಗಳು ಏರ್ಪಡಬೇಕು. ಈ ಉದ್ದೇಶವನ್ನು ಸಾಧಿಸಲು ಬೇಕಾದ ಸಾಧನಗಳು ಸಮಾಜದ ರಾಜ್ಯ ವ್ಯವಸ್ಥೆಯಲ್ಲಿ ವ್ಯಕ್ತವಾಗಿರಬೇಕು. ಉದಾಹರಣೆಗೆ ರಾಜಕೀಯ ಸಂಸ್ಥೆಗಳು ಅಥವಾ ವ್ಯಕ್ತಿಗಳನ್ನು ಪ್ರತಿನಿಧಿಸದೆ ಸಮುದಾಯಗಳನ್ನು ಪ್ರತಿನಿಧಿಸುವಂತೆ ರಾಜ್ಯ ರಚನೆಯಾಗಬೇಕು. ಇದು ಪ್ರಾಥಮಿಕ ಸಮುದಾಯದಿಂದಲೆ ಪ್ರಾರಂಭವಾಗಿ ಮೇಲಕ್ಕೆ ಹೋದಂತೆಲ್ಲಾ ಹೊರ ಜಗತ್ತಿನ ವಿಶಾಲವಾದ ವರ್ತುಲಗಳನ್ನು ಸ್ಪರ್ಶಿಸಬೇಕು.

ಸಮುದಾಯವೇ ಒಂದು ಪಕ್ಷದ ಸ್ಥಾನದಲ್ಲಿ ನಿಲ್ಲುತ್ತದೆ. ಸಮುದಾಯದಲ್ಲಿಯ ಮತ್ತು ಇತರ ಸಮುದಾಯಗಳ ಮಧ್ಯದಲ್ಲಿಯ ಭಿನ್ನಾಭಿಪ್ರಾಯಗಳು ಹೊಂದಾಣಿಕೆಯ ಮೂಲಕ ಮತ್ತು

ಸಮನ್ವಯಗೊಳಿಸುವುದರ ಮೂಲಕ ಬಗೆಹರಿಯಲ್ಪಡುವುವು. ಹೀಗೆ ಇದು ಪ್ರತಿಯೊಂದು ಹಂತದಲ್ಲಿ ನಡೆಯುತ್ತಾ ಹೋಗುವುದು.

ವಿದೇಶಗಳ ಸಂಬಂಧದ ಕ್ಷೇತ್ರದಲ್ಲಿ ಕೂಡ ಈ ಪ್ರಕಾರದ ಹೊಂದಾಣಿಕೆ ರಷ್ಯಾ ಮತ್ತು ಅಮೇರಿಕಾ ಈ ಮುಂತಾದ ದೇಶಗಳಲ್ಲಿ ವ್ಯವಹಾರಿಕ ಪ್ರತಿಪಾದನೆ ಎಂದೇ ಮಾನ್ಯ ಮಾಡಲ್ಪಟ್ಟಿದೆ. ಆದರೆ ಈ ವಿಚಾರ ರಾಷ್ಟ್ರೀಯ ಸಮುದಾಯದಲ್ಲಿ ಸಾಧ್ಯವಿಲ್ಲವೆಂದು ಯೋಚಿಸಲಾಗುತ್ತಿರುವುದು ವಿಲಕ್ಷಣವಾಗಿದೆ. ಒಂದು ವೇಳೆ ಅದನ್ನು ಸಾಧ್ಯ ಮಾಡಬಹುದಾದರೆ, ಬಹು ಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ತಮ್ಮ ಇಚ್ಛೆಯನ್ನು ಪ್ರಜ್ಞಾ ತಾಂತ್ರಿಕವಾಗಿ ಹೇರುವುದರ ಮೂಲಕ ಸಾಧ್ಯವೆಂದು ಯೋಚಿಸಲಾಗುತ್ತಿದೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಬಹುಸಂಖ್ಯಾತ ರಾಷ್ಟ್ರಗಳು ಅಲ್ಪ ಸಂಖ್ಯಾತ ರಾಷ್ಟ್ರಗಳ ಮೇಲೆ ತಮ್ಮ ಇಚ್ಛೆಯನ್ನು ಹೇರಬಹುದೆಂಬುದನ್ನು ಯೋಚಿಸುವುದು ಅಸಾಧ್ಯ. ಹಾಗೇನಾದರೂ ಬಹುಸಂಖ್ಯಾತರ ಇಚ್ಛೆಯೇ ನೆರವೇರುತ್ತಾ ಹೋದಲ್ಲಿ ಆ ವಿಶ್ವಸಂಸ್ಥೆಯು ತಕ್ಷಣವೇ ಮುರಿದುಹೋಗುವುದು. ಆದ್ದರಿಂದ ಪ್ರತಿಯೊಂದು ದೇಶದ ಒಳಿತಿಗಾಗಿ ಹೊಂದಾಣಿಕೆ ಮತ್ತು ಸ್ವಆಸಕ್ತಿಗಳ ಸಾಮರಸ್ಯದ ವಿಧಾನಗಳನ್ನು ಕಂಡುಹಿಡಿಯುವುದು ಅಗತ್ಯವಾಗುತ್ತದೆ. ಈ ಪ್ರಕಾರದ ಹೊಂದಾಣಿಕೆಯ ಅಗತ್ಯವನ್ನು ನೈತಿಕ ಆಧಾರದ ಮೇಲೆ ಒಪ್ಪಲಾಗುತ್ತಿಲ್ಲವೆಂಬುದೇನೋ ನಿಜ. ಹಾಗೇನಾದರೂ ಅದಕ್ಕೆ ಒಪ್ಪಿಗೆ ದೊರೆಯುತ್ತಿದ್ದರೆ ಅದಕ್ಕೆ ಕಾರಣ ಯುದ್ಧ ಸಂಭವಿಸಬಹುದೆಂಬ ಭೀತಿ ಮತ್ತು ವಿನಾಶಕಾರಿ ಶಸ್ತ್ರಾಸ್ತ್ರಗಳ ಭೀತಿ. ಆದರೂ ಸಹ ಈ ಅಗತ್ಯವನ್ನು ಮಾನಸಿಕವಾಗಿ ಅಂಗೀಕರಿಸಿರುವುದು ಮಾತ್ರ ನಿಜ. ಇಷ್ಟೇ ಸ್ಪಷ್ಟವಾದ ಅಗತ್ಯತೆಯ ಭಾವನೆ ರಾಷ್ಟ್ರದೊಳಗಿನ ಸಮುದಾಯದಲ್ಲಿ ಇಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಸಮುದಾಯವೆಂಬುದು ಇಲ್ಲವೇ ಇಲ್ಲವೇನೋ ಎಂಬಂತಹ ಸ್ಥಿತಿ ಇದೆ. ಜನನಿಬಿಡತೆಯಿಂದ ಕೂಡಿದ ಸಮಾಜದಲ್ಲಿ ಒಂದು ಪ್ರಕಾರದ ಅಸಂತೋಷ ಹೊರ ಹೊಮ್ಮಬಹುದು. ಅದು ಕಾಲ ಕ್ರಮೇಣ ಇಂದಿನ ಅಧಿಕಾರ ದಾಹ ಆಧಾರಿತ ಹೋರಾಟದ ರಾಜಕೀಯ ವ್ಯವಸ್ಥೆಯನ್ನು ತೊಡೆದು ಹಾಕಿ ಆ ಸ್ಥಾನದಲ್ಲಿ ಏಕತೆ ಮತ್ತು ಸಹಕಾರದ ವ್ಯವಸ್ಥೆಯನ್ನು ಸ್ಥಾಪಿಸಬಹುದು.

ಭಾರತದಲ್ಲಿ ಮತ್ತು ಏಷ್ಯ ಹಾಗೂ ಆಫ್ರಿಕಾದ ಅಭಿವೃದ್ಧಿಶೀಲ ದೇಶಗಳಲ್ಲಿ ಪರಿಸ್ಥಿತಿ ಹೆಚ್ಚು ಅನುಕೂಲಕರವಾಗಿದೆ. ಪ್ರಾಥಮಿಕ ಸಮುದಾಯವಾದ ಹಳ್ಳಿ ಮತ್ತು ಚಿಕ್ಕ ಊರುಗಳು ಇನ್ನೂ ಜೀವಂತವಾಗಿವೆ. ಅಲ್ಲಿ ನಿಜವಾದ ಸಮುದಾಯ ಭಾವನೆ ಇಲ್ಲವೆಂಬುದು ನಿಜ. ಆದರೆ ಸಮುದಾಯದ ಹೊರ ಕವಚವಾದರೂ ಇದೆ ಎಂಬುದು ಗಮನಾರ್ಹ.

ಈಗ ಆ ಕವಚದ ಒಳಗೆ ಪ್ರಾಣವನ್ನು ತುಂಬುವುದರ ಮೂಲಕ ಹಳ್ಳಿಗಳನ್ನೂ ಚಿಕ್ಕ ಊರುಗಳನ್ನೂ ನೈಜ ಸಮುದಾಯಗಳನ್ನಾಗಿ ಮಾಡಬೇಕಾಗಿದೆ. ಆದರೆ ಹಳ್ಳಿಗಳಲ್ಲಿ ರಾಜಕೀಯ ವ್ಯವಸ್ಥೆಯನ್ನೇನಾದರೂ ಜಾರಿಗೆ ತಂದಲ್ಲಿ ಈಗಾಗಲೇ ಕುಲಗೆಟ್ಟಿರುವ ಸಮುದಾಯವನ್ನು ಇನ್ನೂ ಹೆಚ್ಚು ಕುಲಗೆಡಿಸಿದಂತಾಗುತ್ತದೆ. ಇದರ ಪರಿಣಾಮವೇನೆಂದರೆ ಸಾಮುದಾಯಿಕ ಭಾವನೆ ಮತ್ತು ಸಮರಸದ ಭಾವನೆ ಜಾಗೃತಗೊಳ್ಳುವುದರ ಬದಲಾಗಿ ಹಾಳಾಗುವುವು. ಪಂಚಾಯತ್ ರಾಜ್ಯ ಅಥವಾ ಸಮುದಾಯಿಕ ರಾಜ್ಯ ಜನನಿಬಿಡ ಸಮಾಜದ ರಾಜ್ಯವ್ಯವಸ್ಥೆಯನ್ನು ನಕಲು ಮಾಡಬಾರದು. ಈ ಕಾರಣಕ್ಕಾಗಿಯೇ ಗಾಂಧೀಜಿ ಸಂಸದೀಯ ಪ್ರಜಾಪ್ರಭುತ್ವವನ್ನು ನಿರಾಕರಿಸಿದರು ಮತ್ತು ಅದನ್ನು ಬಹುಮತದವರ ದಬ್ಬಾಳಿಕೆಯೆಂದು ಕರೆದರು. ಹಾಗೂ ಗ್ರಾಮ ರಾಜ್ಯಕ್ಕೆ ಮಹತ್ವ ಕೊಟ್ಟರು. ತಾರ್ಕಿಕವಾಗಿ ಇದು ನಗರ ರಾಜ್ಯವೂ ಆಗಬಹುದು. ಈ ಗ್ರಾಮರಾಜ್ಯ ಮತ್ತು ನಗರರಾಜ್ಯಗಳೇ ಸ್ವರಾಜ್ಯದ ಆಧಾರವಾಗಿರಬೇಕೆಂದು ಗಾಂಧೀಜಿ ಹೇಳಿದರು. ಈ ಕಾರಣಕ್ಕಾಗಿಯೇ ಗಾಂಧೀಜಿ ಸಹಮತವನ್ನು ಮೂಡಿಸುವುದರ ಮೂಲಕ ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯನ್ನು ಶಿಫಾರಸ್ಸು ಮಾಡಿದರು. ಮತ್ತು ನಿರ್ಲಿಪ್ತತೆಯಿಂದ ಕೂಡಿದ ನೈತಿಕ ಶಕ್ತಿಯ ಪಾತ್ರದ ಬಗ್ಗೆ ಬಹಳ ಒತ್ತು ಕೊಟ್ಟು ಹೇಳಿದ್ದರು. ಈ ತಟಸ್ಥ ನೈತಿಕ ಶಕ್ತಿ ನಿಸ್ವಾರ್ಥಪೂರ್ಣವಾದ ಸೇವೆಯ ಮೂಲಕ ಬರುವಂಥದ್ದಾಗಿರುತ್ತದೆ ಮತ್ತು ಈ ನೈತಿಕ ಶಕ್ತಿಯೇ ಎಲ್ಲರನ್ನೂ ಕೂಡಿಡುವ ಮತ್ತು ತಪ್ಪನ್ನು ಸರಿಪಡಿಸುವ ಶಕ್ತಿಯಾಗಿರುತ್ತದೆ. ಇದು ಗಾಂಧೀಜಿ ಕಲ್ಪನೆಯ ಪ್ರಜಾಪ್ರಭುತ್ವದಲ್ಲಿ ಇರುವಂಥಹ ವ್ಯವಸ್ಥೆ.

ಕೊನೆಯ ಮಾತನ್ನು ಸಂಕ್ಷಿಪ್ತವಾಗಿ ಹೇಳ ಬಯಸುತ್ತೇನೆ. ಸಾಮುದಾಯಕ ಸಮಾಜದಲ್ಲಿ ವ್ಯಕ್ತಿಯ ವಿಶೇಷತೆ ಅಡಗಿ ಹೋಗುವುದು, ಹಾಗು ವ್ಯಕ್ತಿಯ ಗೌರವ ಮತ್ತು ಏಳಿಗೆಗಾಗಿ ಅಗತ್ಯವಾಗಿರುವ ಅಂಶಗಳನ್ನು ಅವನು ಪಡೆಯಲಾರದೆ ಹೋಗಬಹುದು ಎಂದೂ ಹೇಳಲಾಗುತ್ತದೆ. ಆದರೆ ಈ ಪ್ರಕಾರದ ಸಮಾಜಕ್ಕೆ ವಿರೋಧವಾಗಿರುವಂತಹ ಸಮುದಾಯದಲ್ಲಿ ವ್ಯಕ್ತಿಯು ರಾಜಕೀಯ ವ್ಯವಸ್ಥೆಯ ಒಂದು ಘಟಕವಾಗಿ ಪರಿಗಣಿಸಲ್ಪಟ್ಟು ಅದರಲ್ಲಿ ಅವನು ತನ್ನ ವ್ಯಕ್ತಿತ್ವವನ್ನು ಪಡೆದು ತನ್ನ ಅಭಿವೃದ್ಧಿಯನ್ನು ಸಾಧಿಸಬಹುದು ಎಂದು ಹೇಳಲಾಗುತ್ತದೆ. ಈ ಮಾತು ಸತ್ಯಕ್ಕೆ ದೂರವಾದುದು. ವಾಸ್ತವಿಕ ಸಂಗತಿ ಏನೆಂದರೆ ಜನನಿಬಿಡ ಸಮಾಜದಲ್ಲಿ ವ್ಯಕ್ತಿಯ ಸಾರ್ವಭೌಮತ್ವವಿದೆ ಎಂದು ತಪ್ಪಾಗಿ ಹೇಳಲಾಗುತ್ತಿದೆ. ಅಂತಹ ಸಮಾಜದಲ್ಲಿ ವ್ಯಕ್ತಿ ತನ್ನಿಂದ ತಾನೇ ದೂರವಾಗುತ್ತಾನೆ ಮತ್ತು ಹೆಸರಿಲ್ಲದ ಸಂಖ್ಯೆಯಾಗುತ್ತಾನೆ. ವ್ಯಕ್ತಿಯ ಈ ದುರವಸ್ಥೆಯನ್ನು ರಾಜಕೀಯ ಮತ್ತು

ಆರ್ಥಿಕ ಯಜಮಾನಿಕೆಯನ್ನು ಹೊಂದಿದವರು ಅಧಿಕಾರದ ಲಾಭ ಮತ್ತು ಕೀರ್ತಿಗಾಗಿ ದುರುಪಯೋಗಪಡಿಸಿಕೊಳ್ಳುತ್ತಾರೆ. ಇಂದಿನ ಆಧುನಿಕ ಸಮಾಜದಲ್ಲಿ ವ್ಯಕ್ತಿಯು ಸಾಮಾಜಿಕ ಮತ್ತು ಆರ್ಥಿಕ ಶಕ್ತಿಗಳ ದುರುದ್ದೇಶಕ್ಕೆ ಗುರಿಯಾಗುತ್ತಾನೆ. ಆ ಶಕ್ತಿಗಳ ಮೇಲೆ ಅವನಿಗೆ ಕಿಂಚಿತ್ತೂ ನಿಯಂತ್ರಣವಿಲ್ಲ. ಇದಕ್ಕೆ ವಿರುದ್ಧವಾಗಿ ಯಾವ ಸಮುದಾಯದಲ್ಲಿ ಸಾಮುದಾಯಿಕ ಭಾವನೆ ಇದೆಯೋ, ಅಂತಹ ಸಮುದಾಯದಲ್ಲಿ ವ್ಯಕ್ತಿ ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿರುತ್ತಾನೆ ಮತ್ತು ಬೇರೆ ಜನರ ಜೊತೆ ವಾಸಿಸುತ್ತಾನೆ ಮತ್ತು ಅತ್ಯುತ್ತಮ ಮಾನವನಾಗಿ ಅಭಿವೃದ್ಧಿಗೊಳ್ಳಲು ಸಾಧ್ಯತೆಯಿರುತ್ತದೆ. ವ್ಯಕ್ತಿ ಮತ್ತು ಸಮುದಾಯದ ಮಧ್ಯದ ಸಂಬಂಧವಾಗಿ ಗಾಂಧೀಜಿ ಈ ರೀತಿ ಹೇಳಿದ್ದಾರೆ. "ವ್ಯಕ್ತಿ ಸಮುದಾಯಕ್ಕಾಗಿ ಪ್ರಾಣವನ್ನರ್ಪಿಸಲು ಸಿದ್ಧನಿರುತ್ತಾನೆ. ಅದೇ ರೀತಿ ಸಮುದಾಯುವು ವ್ಯಕ್ತಿಗಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧವಾಗಿರುತ್ತದೆ." ಈ ಮನೋವೃತ್ತಿ, ವ್ಯಕ್ತಿ ಮತ್ತು ಸಮುದಾಯದಲ್ಲಿ ಎಷ್ಟರ ಮಟ್ಟಿಗೆ ಬೆಳೆದಿರುತ್ತದೋ ಅಷ್ಟರ ಮಟ್ಟಿಗೆ ವ್ಯಕ್ತಿಯ ಮತ್ತು ಸಮಾಜದ ವಿಕಾಸವಾಗುತ್ತದೆ. ಈ ಗುರಿಯನ್ನು ಸಾಧಿಸಬಹುದಾದಂತಹ ಅತ್ಯುತ್ತಮ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪ್ರಕ್ರಿಯೆಗಳನ್ನು ಹಾಗೂ ಸಂಸ್ಥೆಗಳನ್ನು ಕಂಡು ಹಿಡಿಯಬೇಕಾದ ಕೆಲಸ ನಮ್ಮ ಮುಂದೆ ಇದೆ. ಪಂಚಾಯತ್ ರಾಜ್ಯದ ಪರಿಣಾಮಗಳನ್ನು ನಾನು ನೋಡುವ ರೀತಿ ಇದಾಗಿದೆ. ಧರ್ಮಪಾಲ್‌ರ ಈ ಪ್ರಕಟಣೆ ಈ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ವಿಚಾರಗಳನ್ನು ಉತ್ತೇಜಿಸುವುದೆಂದು ನಾನು ನಂಬಿದ್ದೇನೆ.

***

ಈ ಪ್ರಪಂಚದಲ್ಲಿ ಸ್ವಪ್ರಯತ್ನದಿಂದ ಮುಂದೆ ಬಂದಿರುವ ಜನರಿಗಿಂತ ಸ್ವಯಂಕೃತ ಅಪರಾಧಗಳಿಂದ ಹಿಂದುಳಿದವರೆ ಹೆಚ್ಚು.

–ಆರ್ನಾಲ್ಡ್ ಗ್ಲಾಸೌ

ಜನಪದ ನಿಲಯದ ಅಂತರಂಗದಲ್ಲಿ......7

–ಸು. ಕೌ.



ಮೇಲುಕೋಟೆಯನ್ನು ನನ್ನ ಕಾರ್ಯಕ್ಷೇತ್ರವನ್ನಾಗಿ ಅಂತಿಮವಾಗಿ ಆಯ್ಕೆ ಮಾಡಿಕೊಂಡದ್ದು ೧೯೫೯ ರ ಕೊನೆಯಭಾಗದಲ್ಲಿ. ಈ ಮೊದಲು ೧೯೫೮ ರಲ್ಲಿ ವಿನೋಬಾ ತಮ್ಮ ಪಾದಯಾತ್ರೆಯ ಮಾರ್ಗದಲ್ಲಿ ಮೇಲುಕೋಟೆಗೂ ಸಹ ಬಂದು ಇಲ್ಲಿ ಮೂರು ದಿನಗಳಕಾಲ ತಮ್ಮ ವಾಸ್ತವ್ಯ ಹೂಡಿದ್ದರು. ಆಗ ಮೇಲುಕೋಟೆಯ ಜನರು ಸ್ಥಳೀಯ ಸ್ವಾಗತಸಮಿತಿ ರಚಿಸಿಕೊಂಡು ವಿನೋಬಾ ಮತ್ತು ಅವರ ಜೊತೆಯಾತ್ರಿಗಳಿಗೆ ವಸತಿ ಸೌಕರ್ಯ ಮತ್ತು ಅತಿಥ್ಯದ ಏರ್ಪಾಡು ಮಾಡಿಕೊಂಡಿದ್ದರು. ಆ ಸ್ವಾಗತಸಮಿತಿಯಲ್ಲಿ ಇದ್ದು ಕೆಲಸ ಮಾಡಿದವರಲ್ಲಿ ಈಗ ಅನೇಕರು ಇಲ್ಲವಾಗಿದ್ದಾರೆ. ಆದರೆ ನಮ್ಮ ಸುದೈವದಿಂದ ಇಂದಿಗೂ ಪು.ತಿ. ಕೃಷ್ಣಯ್ಯಂಗಾರ್ ಮತ್ತು ಅರೈಯರ್ ಶ್ರೀ ನಿವಾಸ ಅಯ್ಯಂಗಾರ್ ನಮ್ಮ ಮಧ್ಯೆ ಇದ್ದಾರೆ ಈ ಇಬ್ಬರಿಗೂ ಕೂಡ ಈಗ ಸಾಕಷ್ಟು ವಯಸ್ಸಾಗಿದೆ. ಅ ಸ್ವಾಗತ ಸಮಿತಿಯು ವಿನೋಬಾ ತಂಡಕ್ಕೆ ಒಳ್ಳೆಯ ವ್ಯವಸ್ಥೆ ಮಾಡಿತ್ತು. ವಿನೋಬಾರವರನ್ನು ನಾರಾಯಣಸ್ವಾಮಿ ದೇವಸ್ಥಾನದ ಹಿಂದಿರುವ ಆಂಡಾಳ್ ರಾಮಾನುಜ ಛತ್ರದಲ್ಲಿ ಇರಿಸಲಾಗಿತ್ತು. ತಂಡದ ಸದಸ್ಯರನ್ನು ಶ್ರೀನಾರಯಣಸ್ವಾಮಿ ದೇವಸ್ಥಾನದ ಕೈಸಾಲೆಯಲ್ಲಿ ಇರಿಸಲಾಗಿತ್ತು. ವಿನೋಬಾ ಮೇಲುಕೋಟೆಯಲ್ಲಿದ್ದಾಗ ಅವರನ್ನು ಊರಿನ ಎಲ್ಲ ಹಿರಿಯರು ಮತ್ತು ಪ್ರಮುಖ ವ್ಯಕ್ತಿಗಳು ಸರದಿಯ ಪ್ರಕಾರ ಭೇಟಿ ಮಾಡಿ ವಿನೋಬಾರ ವಿಚಾರಗಳನ್ನು ತಿಳಿದಿದ್ದರು. ಅಂಥ ಪ್ರಮುಖರಲ್ಲಿ ಪು.ತಿ.ನ ಸಹ ಒಬ್ಬರು. ಹೀಗಾಗಿ ಮೇಲುಕೋಟೆ ಗ್ರಾಮ ಸರ್ವೋದಯ ವಿಚಾರಕ್ಕೆ ತನ್ನನ್ನು ತಾನು ತೆರೆದು ಕೊಂಡಿತ್ತು. ಇದಕ್ಕೆ ಅಗತ್ಯವಾದ ಭೂಮಿಕೆಯನ್ನು ಕುಟ್ಟಿ ಮತ್ತು ಅರೈಯರ್ ಶ್ರೀನಿವಾಸ್ ಅಯ್ಯಂಗಾರ್, ಖಾದ್ರಿ ಶಾಮಣ್ಣ, ಜಗ್ಗು ನಾರಾಯಣ ಮುಂತಾದವರು ಆಗಲೆ ತಯಾರಿಸಿದ್ದರು. ಇವರೆಲ್ಲರ ಕಾರ್ಯತತ್ಪರತೆಯ ಕಾರಣದಿಂದಲೇ ವಿನೋಬಾ ಮೇಲುಕೋಟೆಗೆ ಬರುವಂಥದ್ದಾದದ್ದು. ಹೀಗೆ ಮೇಲುಕೋಟೆ ಸರ್ವೋದಯ ವಿಚಾರಕ್ಕೆ ತೆರೆದುಕೊಳ್ಳುತ್ತಿರುವ ಸಂಧಿಕಾಲದಲ್ಲಿ ನಾನು ಓರ್ವ ಮೇಲುಕೋಟೆಯ ಯುವ ಸರ್ವೋದಯ

ಕಾರ್ಯಕರ್ತರಾಗಿದ್ದ ಜಗ್ಗುನಾರಾಯಣರವರ ಜೊತೆಗೂಡಿ ಮೇಲುಕೋಟೆಗೆ ಪ್ರಥಮ ಬಾರಿಗೆ ಬಂದೆ.

ಮೇಲುಕೋಟೆಯ ಆಗಿನ ಸಾಂಸ್ಕೃತಿಕ, ಆಧ್ಯಾತ್ಮಿಕ ಮತ್ತು ಶಾಂತಿಪೂರ್ಣ ಪರಿಸರದ ಸನ್ನಿವೇಶ ಹಾಗೂ ಸುತ್ತಲಿನ ಪ್ರಕೃತಿ ಸೌಂದರ್ಯ ನನ್ನ ಮನಸ್ಸನ್ನು ಸೂರೆಗೂಂಡಿತು.

ಗಾಂಧೀ ಮತ್ತು ವಿನೋಬಾರವರ ಚಿಂತನೆಯ ಪ್ರಕಾರ ಮತ್ತು ಅವರ ಪ್ರತ್ಯಕ್ಷ ಕಾರ್ಯವಿಧಾನಗಳ ಉದಾಹರಣೆಯ ಪ್ರಕಾರ ಸರ್ವೋದಯದ ಕೆಲಸ ಹಿಂದುಳಿದ ಪ್ರದೇಶದ ಹಿಂದುಳಿದ ಜನರ ಮಧ್ಯದಲ್ಲಿ ನಡೆಯಬೇಕಾಗಿತ್ತಾದುದರಿಂದಲೂ ನನಗೆ ಮೇಲುಕೋಟೆ ಆ ದೃಷ್ಟಿಯಿಂದ ಸೂಕ್ತ ಸ್ಥಳವೆಂದು ಅನಿಸಿತು.

೧೯೫೦ರ ದಶಕದಲ್ಲಿ ಮೇಲುಕೋಟೆ ಇಂದಿನ ಯಾವ ಆಧುನಿಕ ಸೌಕರ್ಯವನ್ನೂ ಪಡೆದಿರಲ್ಲ. ಒಂದು ದಿನಕ್ಕೆ ಒಂದೇ ಸಲ ಅಂಚೆ ಬಂದು ಹೋಗುತ್ತಿತ್ತು. ಅದನ್ನು ಸಹ ಓರ್ವ ಇಳಿವಯಸ್ಸಿನ 'ರನ್ನರ್' ಜಕ್ಕನಹಳ್ಳಿ ಪಕ್ಕದ ನ್ಯಾಮನಹಳ್ಳಿಯಿಂದ ಸುಮಾರು ೫ ಮೈಲಿಯಿಂದ ತರುತ್ತಿದ್ದ, ಬ್ಯಾಂಕ್ ಸೌಕರ್ಯ ಇರಲಿಲ್ಲ, ಪ್ರಾಥಮಿಕ ಆರೋಗ್ಯ ಕೇಂದ್ರವೊಂದಿತ್ತು. ಹಳ್ಳಿಯ ಜನ ಎತ್ತಿನ ಗಾಡಿ ಕಟ್ಟಿಕೂಂಡು ಬರುತ್ತಿದ್ದರು. ದೂರದ ಗರ್ಭಿಣಿ ಮಹಿಳೆಯರು ಕೂಡ ಎತ್ತಿನ ಗಾಡಿಯಲ್ಲೆ ಬರುತ್ತಿದ್ದರು. ಪಕ್ಕದ ಮತ್ತು ದೂರದ ಹಳ್ಳಿಗಳಿಗೆಲ್ಲ ನಡೆದುಕೂಂಡೆ ಹೋಗಬೇಕಾಗಿತ್ತು. ವಿದ್ಯುತ್ ದೀಪಗಳು ಮಿಣಿ ಮಿಣಿ ಯಾಗಿ ಉರಿಯುತ್ತಿದ್ದವು. ಮೈಸೂರು-ಬೆಂಗಳೂರು ಕಡೆಗೆ ಒಂದೆರಡು ಖಾಸಗಿ ಬಸ್ಸುಗಳಿದ್ದವು.

ಇದು ಮೇಲುಕೋಟೆಯ ಚಿತ್ರಣವಾದರೆ ಸುತ್ತಲಿನ ಗ್ರಾಮಗಳ ಸ್ಥಿತಿ ಭಿನ್ನವೇನಾಗಿರಲಿಲ್ಲ. ಸುತ್ತಲೂ ಒಣಭೂಮಿ ಪ್ರದೇಶ, ಮಳೆಯನ್ನವಲಂಬಿಸಿದ ವ್ಯವಸಾಯ ಇದ್ದುದರಿಂದ ಗ್ರಾಮಗಳಲ್ಲಿ ಬಹಳಷ್ಟು ಬಡತನವಿತ್ತು. ನಿರಕ್ಷರತೆ ಇತ್ತು. ಗ್ರಾಮಗಳಲ್ಲಿ ಯಾವ ಉದ್ಯೋಗವೂ ಇಲ್ಲದಿದ್ದರಿಂದ ಹಳ್ಳಿಯ ಮಹಿಳೆ, ಪುರುಷ, ಮಕ್ಕಳಾದಿಯಾಗಿ ಪಕ್ಕದ ವಸಂತಪುರವೆಂಬ ಕಾಡಿನ ಒಳಗೆ ಹೋಗಿ ಸೌದೆ ಸಂಗ್ರಹಿಸಿ ೫-೬ ಮೈಲಿಯ ದೂರದ ಮೇಲುಕೋಟೆಗೆ ತಲೆಯ ಮೇಲೆ ಹೂರೆ ಹೂತ್ತುಕೊಂಡು ಬಂದು 'ಸೌದೆ ಸೌದೆ' ಎಂದು ಕೂಗುತ್ತ ಊರಿನ ಓಣಿ, ಓಣಿ ಸುತ್ತುತ್ತಿದ್ದರು. ಆ ಒಂದು ಹೊರೆಯ ಬೆಲೆ ಸಾಮಾನ್ಯವಾಗಿ ಒಂದೂವರೆ ರೂಪಾಯಿಯಿಂದ ಎರಡು ರೂಪಾಯಿ ಮಾತ್ರ. ಇಷ್ಟು ಹಣ ಸಂಪಾದನೆಗಾಗಿ ಅವರು ಇಡೀ ದಿನ ಪರಿಶ್ರಮ ಪಡಬೇಕಾಗಿತ್ತು.ಅದೇ ರೀತಿಯ ವ್ಯಾಪಾರವನ್ನು ಮೇಲುಕೋಟೆಯ ಪಕ್ಕದ ಹಳ್ಳಿಯವರು ಮಾಡುತ್ತಿದ್ದುದು. ಮೊಸರು

ವ್ಯಾಪಾರ, ಬಿದಿರಿನ ಬುಟ್ಟಿಯ ಮಧ್ಯ ಮಡಕೆಯಲ್ಲಿ ಮೊಸರು ತುಂಬಿಕೊಂಡು ಅದನ್ನು ತಲೆಯಮೇಲೆ ಇಟ್ಟುಕೊಂಡು ಮೊಸರು-ಮೊಸರು ಎಂದು ಬೆಳಗಿನ ಜಾವ ಕೂಗುತ್ತಾ ಊರಿನ ಬೀದಿ-ಬೀದಿ ಸುತ್ತುತ್ತಿದ್ದರು. ಅವರ ಬಳಿ ಇರುತ್ತಿದ್ದ ಬಿದುರಿನ ಒಂದು ಪಾವು ಮೊಸರಿಗೆ ಹತ್ತು ಪೈಸೆಯಿಂದ-ಹದಿನೈದುಪೈಸೆ. ಹೀಗೆ ಅರ್ಧ ದಿನವೆಲ್ಲ ಸುತ್ತಾಡಿ ಮೊಸರು ಮಾರಿದರೆ ಅವರಿಗೆ ಹತ್ತುರೂಪಾಯಿ ಸಿಗುತ್ತಿತ್ತೆನೋ. ಸೌದೆ ಮತ್ತು ಮೊಸರು ಮಾರುವ ಕೆಲಸದಲ್ಲಿ ವಯಸ್ಸಾದ ಮಹಿಳೆಯರು, ಅವರೊಂದಿಗೆ ಹತ್ತುಹನ್ನೆರಡು ವರ್ಷದ ಹುಡುಗಿಯರು ಇರುತ್ತಿದ್ದರು. ಪ್ರತಿ ಮಂಗಳವಾರ ನಡೆಯುತ್ತಿದ್ದ ಸಂತೆಗೆ ತರಕಾರಿ,ಕಾಳು- ಕಡ್ಡಿ ಇತ್ಯಾದಿ ತರುತ್ತಿದ್ದರು. ಬಹಳ ಚಿಕ್ಕದಾದ ಸಂತೆ, ಮೇಲುಕೋಟೆಯ ಜನಸಂಖ್ಯೆ ಎರಡರಿಂದ ಮೂರು ಸಾವಿರ ಇದ್ದುದರಿಂದ ಸಂತೆಗೆ ಬರುವ ಜನರ ಸಂಖ್ಯೆಯು ಕಡಿಮೆ ಇರುತ್ತಿತ್ತು ಆದ್ದರಿಂದ ಪಧಾರ್ಥಗಳನ್ನು ತಂದ ರೈತರಿಗೆ ಹೇಳಿಕೊಳ್ಳುವಷ್ಟು ದೊಡ್ಡ ಪ್ರಮಾಣದಲ್ಲಿ ವ್ಯಾಪಾರವೇನಾಗುತ್ತಿರಲಿಲ್ಲ. ಎಷ್ಟು ವ್ಯಾಪಾರವಾಯಿತೋ ಅದೇ ದೊಡ್ಡದೆಂದು ಭಾವಿಸಿ ಮನೆಗೆ ಹೋಗುತ್ತಿದ್ದರು. ವಾರದ ಈ ಚಿಕ್ಕ ಸಂತೆಗೆ ಮೇಲುಕೋಟೆ ಪಕ್ಕದ ಹಳ್ಳಿಯವರು ತರಕಾರಿಗಳನ್ನು ಕುಕ್ಕೆಯಲ್ಲಿ ತುಂಬಿಕೊಂಡು ತಲೆ ಮೇಲೆ ಹೊತ್ತುಕೊಂಡು ಬರುತ್ತಿದ್ದರು.

ಮೇಲುಕೋಟೆಯಲ್ಲಿಯ ದೇವಸ್ಥಾನಗಳೇನೊ ಜಗತ್ ಪ್ರಸಿದ್ಧವಾಗಿದ್ದವು. ಆದರೆ ದೇವಸ್ಥಾನಗಳಲ್ಲಿ ಕೆಲಸಮಾಡುತ್ತಿದ್ದ ನೌಕರರಿಗೆ, ತಿಂಗಳಿಗೆ ನಾಲ್ಕು ರೂಪಾಯಿಯಿಂದ ಹತ್ತು ರೂಪಾಯಿಗಳ ಸಂಭಾವನೆ ಮಾತ್ರ ಇತ್ತು. ಅವರಲ್ಲಿ ಕೆಲವರಿಗೆ ಮಾತ್ರ ಆರತಿ ತಟ್ಟೆಯಲ್ಲಿಯ ಹಣ ದೊರೆಯುತ್ತಿತ್ತು.

ಹೀಗೆ ಒಟ್ಟಾರೆಯಾಗಿ ಮೇಲುಕೋಟೆ ಪ್ರಕೃತಿ ಸೌಂದರ್ಯದ ಮಧ್ಯೆಯೂ ವಿದ್ವತ್ತು, ಸಂಸ್ಕೃತ ಇತ್ಯಾದಿಗಳ ಮಧ್ಯೆಯೂ ಬಡಕಲಾದ ಊರಾಗಿ ಸಾವಿರ ವರ್ಷಗಳ ಇತಿಹಾಸದ ಮುಸುಕನ್ನು ಹೊದ್ದುಕೊಂಡು ಹೊರ ಪ್ರಪಂಚದ ಸಂಪರ್ಕವಿಲ್ಲದೆ ಮಲಗಿತ್ತು.

ನಾನು ಪ್ರಥಮ ಬಾರಿಗೆ ಸಂಜೆ ಹೊತ್ತು ಬೆಟ್ಟಹತ್ತಿ ಯೋಗಾನರಸಿಂಹಸ್ವಾಮಿಯ ದರ್ಶನ ಮಾಡಿದುದು ಒಂದು ವಿಶೇಷ ಅನುಭವದ ಸಂಗತಿಯಾಗಿತ್ತು. ಆಗಲೇ ನಾನು ಮೊದಲ ಬಾರಿಗೆ ನರಸಿಂಹಸ್ವಾಮಿಯ ಅಷ್ಟೋತ್ತರ ಕೇಳಿದ್ದು, ಅದೂ ಕಸ್ತೂರಿನಾರಾಯಣ ಅಯ್ಯಂಗಾರರ ಕಂಚಿನ ಘಂಟಾನಾದದಲ್ಲಿ, ಶ್ರೀರಾಘವ ಭಟ್ಟರ ಮೆಲುದನಿಯೊಂದಿಗಿನ ಕುಂಭಮಂಗಳಾರತಿ, ಕರ್ಪೂರದಾರತಿಯ

ಬೆಳಕಿನಲ್ಲಿ. ಒಳಗೆ ದೇವರ ಸಾನಿಧ್ಯದ ಅನುಭವ, ಹೊರಗೆ ಸುತ್ತಲೂ ಪ್ರಕೃತಿಯ ಹಾಸಿನ, ಹಿತ ಸ್ಪರ್ಶ. ಇವುಗಳ ಮೇಳದಿಂದ ಮೇಲುಕೋಟೆಯು ನನ್ನ ಹೃದಯುವನ್ನು ಪ್ರವೇಶಿಸಿತು. ನನ್ನ ಭವಿಷ್ಯದ ಬಗ್ಗೆ ಏನನ್ನೂ ಆಲೋಚಿಸದೆ, ಚಿಂತಿಸದೆ ಮೇಲುಕೋಟೆಯನ್ನು ನನ್ನ ಕಾರ್ಯಕ್ಷೇತ್ರವನ್ನಾಗಿ ಧೃಢವಾಗಿ ಅಪ್ಪಿಕೊಂಡೆ. ಆಗಲೂ ಬೆಟ್ಟದ ಸುತ್ತಲಿನ ಪರಿಸರ, ಕೆಳಗಿನ ಗ್ರಾಮ ಬಗ್ಗೆ ಮೇಲುಕೋಟೆಯ ಪುತ್ರ ಪು.ತಿ.ನ ಹಾಡಿದ

ಏನ್ ಶಾಂತಿಯು, ಸೌಂದರ್ಯವು
ಯಾದವಗಿರಿ ನಭದಿ!
ಏನ್ ಮೌನವು, ನೀರವತೆಯು
ಮಲೆತುದೀ ದೇಗುಲದಿ!
ಈ ಶಾಂತಿಯಳಾಲಿಸದೋ
ಉಡುಲೋಕದಗಾನ;
ಸಮಶೃತಿಲಯ ಹೊಂದಿರುವೀ
ತನು ಮುಚ್ಚಿಹ ಗಾನ!

ಎಂಬೀ ನುಡಿಯನ್ನು ಆಗಲೂ ಗುಣಗುಟ್ಟುತ್ತಿದ್ದಿರಬೇಕು.

ದಿನಕ್ಕೆ ತಾಸುಗಳಿರಲು ನಾಲ್ಕು-ಇಪ್ಪತ್ತು
ಒರಗಿ ಕಳೆಯುವೆ ನೀನು ನಿದ್ದೆಗೊರಕೆಯಲಿ
ಅದರ ತ್ರಯಾಂಶವನು; ಉಳಿದುದನೇನಗೈವೆ?
ಮುಖ ಮಜ್ಜನಕೆ ಏಸು, ಸ್ನಾನ ಧ್ಯಾನಕ್ಕೆಷ್ಟು?
ನಿನ್ನದೇ ಮುಷ್ಟಿಯಲಿರುವ ಹೊತ್ತು ಎಷ್ಟು?
ಕಜ್ಜದೊಳೊ, ಕಾರ್ಯದೊಳೊ, ಒಣ ಹರಟೆಯಲ್ಲೊ;
ನಿನ್ನರಿವ ತೊಡಕಿಸಿ ಮರೆವ ಗಳಿಗೆಯೆಷ್ಟು?
ಹೇಳ್ ಹೇಳು, ದಾಕ್ಷಿಣ್ಯವಿನಿತಿನಿತು ಬೇಡ

–ಶಿವರಾಮ ಕಾರಂತರು

ಆಧಾರ–ಸಾಹಿತ್ಯ ಶ್ರೇಣಿ (ಸಂಪುಟ –೧)

–ಮುಂದುವರೆಯುವುದು

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ವಾಚಕ ಮಿತ್ರರಲ್ಲಿ ವಿನಂತಿ

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ ೧೦೦/- ರೂ. ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ಪ್ರಕಾಶಕರು

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

Re-Direct

...l Executive Officer,
...ka State Khadi and V. I. Board
No. 10, ...illers Tank Bund Road,
BANGALORE-560 052

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com